ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಸೋಮವಾರ, ಜುಲೈ 25, 2022

ಸಂಪುಟ : 49 ಸಂಚಿಕೆ : 72 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ನೀರಜ್ ಚೋಪ್ರಾಗೆ ಬೆಳ್ಳಿ



ಯೂಜೀನ್, ಜು. 24 – ವಿಶ್ವ ಚಾಂಪಿಯನ್‌ಶಿಪ್ ಪಂದ್ಯಾವಳಿಯ ಜಾವಲಿನ್ ಎಸೆತದಲ್ಲಿ ನೀರಜ್ ಚೋಪ್ರ ಅವರು ಬೆಳ್ಳಿ ಪದಕ ಪಡೆದಿದ್ದಾರೆ. ಇದೇ ಮೊದಲ ಬಾರಿಗೆ ಪುರುಷರ ಟ್ರಾಕ್ ವಿಭಾಗದಲ್ಲಿ ಭಾರತಕ್ಕೆ ಪದಕ ದೊರೆತಿದೆ. 24 ವರ್ಷದ ಛೋಪ್ರ ಅವರು ನಾಲ್ಕನೇ ಸುತ್ತಿನಲ್ಲಿ 88.13 ಮೀಟರ್ ದೂರಕ್ಕೆ ಜಾವಲಿನ್ ಎಸೆಯುವ ಮೂಲಕ ಈ ಸಾಧನೆ ಮಾಡಿದ್ದಾರೆ. ಗ್ರೆನೆಡಾದ (2ನೇ ಪುಟಕ್ಕೆ)

## ಬಾಹ್ಯಾಕಾಶ : ಹೂಡಿಕೆ, ಹೊಣೆಗಾರಿಕೆಯಲ್ಲಿ ಸ್ಪಷ್ಟತೆಯ ನಿರೀಕ್ಷೆ

ನವದೆಹಲಿ, ಜು. 24 – ಹಣಕಾಸು ವಿಷಯ ಹಾಗೂ ಅಹಿತಕರ ಘಟನೆಗಳು ನಡೆದಲ್ಲಿ ಹೊಣೆಗಾರಿಕೆಯ ವಿಷಯಗಳ ಕುರಿತು ಸ್ಪಷ್ಟತೆ ಸಿಗುವ ಕಾರಣಕ್ಕಾಗಿ ನೂತನ ಬಾಹ್ಯಾಕಾಶ ನೀತಿಯ ಅಗತ್ಯವಿದೆ ಎಂದು ಬಾಹ್ಯಾಕಾಶ ವಲಯದ ನವೋದ್ಯಮಗಳು ಆಶಿಸುತ್ತಿವೆ. ಪ್ರಸಕ್ತ 100ಕ್ಕೂ ಹೆಚ್ಚು ನವೋದ್ಯಮಗಳು ಉಪಗ್ರಹಗಳ ನಿರ್ಮಾಣ, (2ನೇ ಪುಟಕ್ಕೆ)


## ಕೈಲಾಸ ಶಿವಗಣಾರಾಧನೆ



ಚನ್ನಗಿರ ತಾ, ವಡ್ಡನಹಾಳು ಗ್ರಾಮದ ಹಾಲಿ ದಾವಣಗೆರೆ ವಾಸಿ,
ಶ್ರೀಮತಿ ಪ್ರೇಮಲೀಲಾ ವಿ.ಸಿ ಮತ್ತು ಮಕ್ಕಳು,
ಇವರು ಮಾಡುವ ವಿಜ್ಞಾಪನೆಗಳು
ದಿನಾಂಕ 22.7.2022ನೇ ಶುಕ್ರವಾರ
ಮಧ್ಯರಾತ್ರಿ 1.44 ಗಂಟೆಗೆ ನನ್ನ ಪತಿಯವರಾದ

**ಶ್ರೀ ವಿ.ಜಿ ಲೋಕೇಶ್**
(Retired Supt. Engineer)

ಅವರು ದೈವಾಧೀನರಾದ ಪ್ರಯುಕ್ತ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 26.7.2022ನೇ ಮಂಗಳವಾರ ಬೆಳಿಗ್ಗೆ 11ಕ್ಕೆ
ಸ್ಥಳ : ಷ॥ಬ್ರ॥ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು ಎಂಸಿಸಿ 'ಬಿ' ಬ್ಲಾಕ್ ಶಿವಾಚಾರ್ಯ ನಿಕೇತನ ಹಿರೇಮಠ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಪ್ರೇಮಲೀಲಾ ಮತ್ತು ಮಕ್ಕಳು, ವಂಶಸ್ಥರು ಉಪ್ಪರಿಗೆ ವಂಶಸ್ಥರು ತಾಳ್ಯ, ವಡ್ಡನಹಾಳು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ : 63622 31733

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



॥ ಶ್ರೀ ದಾಗಿನಕಟ್ಟೆ ರಂಗಸ್ವಾಮಿ ಪ್ರಸನ್ನ ॥ ॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ



ದಾವಣಗೆರೆ ಜಿಲ್ಲೆ, ತಾಲ್ಲೂಕು ಶ್ಯಾಮನೂರು ಗ್ರಾಮದ ವಾಸಿ
ಶ್ರೀಮತಿ ಸರಸ್ವತಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿ.: 17.07.22ನೇ ಭಾನುವಾರ ಬೆಳಿಗಿನ ಜಾವ : 1.55 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ದಾಗಿನಕಟ್ಟೆ ಶೇಖರಪ್ಪನವರು**

ನಿವೃತ್ತ ಗ್ರಾಮ ಸಹಾಯಕರು ಕಂದಾಯ ಇಲಾಖೆ
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 25.07.22ನೇ ಸೋಮವಾರ ಬೆಳಿಗ್ಗೆ 10.30 ಕ್ಕೆ ದಾವಣಗೆರೆ ತಾ, ಶ್ಯಾಮನೂರು ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಸಹೋದರರು, ಸಹೋದರಿಯರು, ದಾಗಿನಕಟ್ಟೆ ವಂಶಸ್ಥರು, ಶ್ಯಾಮನೂರು ಗ್ರಾಮಸ್ಥರು ಬಂಧು-ಮಿತ್ರರು.
ಮೊ : 81472 75735, 96322 25777

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.





## ನಲ್ಲೂರು ಸರ್ವೋತ್ತಮರಾವ್ ನಿಧನ

ದಾವಣಗೆರೆ ಮಂಡಿಪೇಟೆಯಲ್ಲಿರುವ
ನಲ್ಲೂರು ದಿನೇಶ್ ಜ್ಯೂಯಲರಿ ಮಾರ್ಟ್ ಮಾಲೀಕರಾದ

**ಶ್ರೀ ನಲ್ಲೂರು ಬಿ.ಎನ್ ಸರ್ವೋತ್ತಮರಾವ್**

ಅವರು, ದಿನಾಂಕ 24.7.2022ರ ಭಾನುವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಶ್ರೀಯುತರು ಧರ್ಮಪತ್ನಿ ಶ್ರೀಮತಿ ಕಲ್ಪನಾ ಸರ್ವೋತ್ತಮ, ಇಬ್ಬರು ಪುತ್ರರು, ಸೊಸೆಯಂದಿರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
**ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ದಿನಾಂಕ 25.7.2022ರ ಸೋಮವಾರ ದಾವಣಗೆರೆಯ ಪಿ.ಜೆ. ಬಡಾವಣೆ ಚರ್ಚ್ ರೋಡ್, 8ನೇ ಮೇನ್‌ನಲ್ಲಿರುವ ಮೃತರ ಸ್ವಗೃಹ ಶ್ರೀ ರಾಮ ನಿವಾಸದಲ್ಲಿ ಇಡಲಾಗುವುದು.**
ನಂತರ ಮಧ್ಯಾಹ್ನ 3 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

**ದುಃಖತಪ್ತ ನಲ್ಲೂರು ಕುಟುಂಬ ವರ್ಗ**


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ **ಶ್ರೀ ಕೆ.ಎಂ. ಪ್ರಭು ಬಿನ್ ಕೆ.ಬಿ. ಮಹೇಶ್ವರಪ್ಪ**, ವಯಸ್ಸು 52 ವರ್ಷ, ವಾಸ : ಶಿರಮಗೊಂಡನಹಳ್ಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ವಾಸಿಗಳಾದ ಇವರ ಪರವಾಗಿ ಕೊಟ್ಟ ಸಾರ್ವಜನಿಕ ಪ್ರಕಟಣೆ ಏನೆಂದರೆ,

ಷೆಡ್ಯೂಲ್ ಸೊತ್ತುಗಳ ಬಗ್ಗೆ ನಮ್ಮ ಕಕ್ಷಿದಾರರು ಅವರ ತಾಯಿಯ ಕುಟುಂಬಕ್ಕೆ ಸೇರಿದ ಪಿತ್ರಾರ್ಜಿತ ಆಸ್ತಿಗಳಿರುತ್ತವೆ. ಮತ್ತು ಅದರಲ್ಲಿ ನಮ್ಮ ಕಕ್ಷಿದಾರರಿಗೂ ಪಾಲು ಇರುತ್ತದೆ ಎಂದು ಪಾಲು ವಿಭಾಗ ಕೋರಿ ನಮ್ಮ ಕಕ್ಷಿದಾರರು ಮಾನ್ಯ ದಾವಣಗೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕಿರಿಯ ವಿಭಾಗ ಇವರಲ್ಲಿ ಅಸಲು ದಾವೆ ನಂ. 407/2018ನ್ನು ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ನಿವಾಸಿಗಳಾದ ಸಂಕೋಳ್ ಚಂದ್ರಶೇಖರಪ್ಪ ಬಿನ್. ಸಂಕೋಳ್ ಭೀಮಜ್ಜ ಹಾಗೂ ಆತನ ಸಹೋದರ ಸಂಕೋಳ್ ಹಾಲಪ್ಪ ಬಿನ್ ಸಂಕೋಳ್ ಭೀಮಜ್ಜ ಹಾಗೂ ಅವರ ಮಕ್ಕಳ ವಿರುದ್ಧ ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಮೇಲ್ಕಂಡವರು ಆಸ್ತಿಗಳನ್ನು ಪರಭಾರೆ ಮಾಡಲು ಪ್ರಯತ್ನಿಸುತ್ತಿರುತ್ತಾರೆಂದು ತಿಳಿಸಿ ಮಾನ್ಯ ಘನ ನ್ಯಾಯಾಲಯದಿಂದ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಇಂಜೆಕ್ಷನ್ ಆದೇಶ ಪಡೆದಿರುತ್ತಾರೆ. ಆದ್ದರಿಂದ ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಕೆಳ ಕಾಣಿಸಿರುವ ಷೆಡ್ಯೂಲ್ ಆಸ್ತಿಗಳ ಬಗ್ಗೆ ಯಾರೇ ಆಗಲೀ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದಾಗಿಯೂ, ಒಂದು ವೇಳೆ ವ್ಯವಹರಿಸಿದಲ್ಲಿ ಅದು ನಮ್ಮ ಕಕ್ಷಿದಾರರ ಹಕ್ಕಿಗೆ ಬಾಧಕವಾಗುವುದಿಲ್ಲ. ಆ ಕಾರಣಕ್ಕಾಗಿ ಮೇಲ್ಕಂಡ ಚಂದ್ರಶೇಖರಪ್ಪ ಹಾಗೂ ವಗೈರೆಯವರ ಜೊತೆ ನಮ್ಮ ಕಕ್ಷಿದಾರರ ಗಮನಕ್ಕೆ ಬಾರದೇ ಯಾವುದೇ ರೀತಿಯ ವ್ಯವಹಾರ ಮಾಡಕೂಡದೆಂದು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಘ, ಸಂಸ್ಥೆಗಳಿಗೆ ಮತ್ತು ಬ್ಯಾಂಕುಗಳಿಗೆ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

### ಷೆಡ್ಯೂಲ್

1) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ಸರ್ವೇ ನಂ. 225/1,4,5,6,7,8,9,10ರಲ್ಲಿ ಒಟ್ಟು ವಿಸ್ತೀರ್ಣ 03-21 ಗುಂಟೆ (ನಗರಾಭಿವೃದ್ಧಿ ಪ್ರಾಧಿಕಾರದ 15 ಗುಂಟೆ ಜಮೀನು ಹೊರತುಪಡಿಸಿ) ಇರುವ ಆಸ್ತಿಗೆ ಚೆಕ್ಕುಬಂದಿ :

ಪೂರ್ವಕ್ಕೆ ಕರೇಗೌಡ್ರ ಸೋಮಶೇಖರಪ್ಪ ಇವರ ಆಸ್ತಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಜೆ.ಹೆಚ್ ಪಟೇಲ್ ಬಡಾವಣೆಗೆ ಹೋಗಿರುವ ಇದೇ ಸರ್ವೇ ನಂ.ಜಮೀನು.

2) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಶಾಮನೂರು ಗ್ರಾಮದ ಈ ಹಿಂದೆ ಸರ್ವೇ ನಂ. 204/ಪಿ ಅಂತಾ ಇದ್ದು, ಈಗ ಹಾಲಿ ಸರ್ವೇ ನಂ. 204/1, 204/7, 204/8, 204/27 ಅಂತಾ ಇರುವ ಆಸ್ತಿಯ ಒಟ್ಟು ವಿಸ್ತೀರ್ಣ 10 ಎಕರೆ 21 ಅದರಲ್ಲಿ ಖರಾಬು 3 ಗುಂಟೆ ವಜಾಜಾತ ಉಳಿದ 10 ಎಕರೆ 18 ಗುಂಟೆ ಜಮೀನಿಗೆ ಚೆಕ್ಕಬಂದಿ : ಪೂರ್ವಕ್ಕೆ ಸಂಕೋಳ್ ಶಿವಪ್ಪ ಇವರ ಆಸ್ತಿ, ಪಶ್ಚಿಮಕ್ಕೆ : ಸಣ್ಣಹಾಲಪ್ಪ, ಚಂದ್ರಶೇಖರಪ್ಪ, ಬಿಂದಪ್ಪ ದೇವೇಂದ್ರಪ್ಪ ವಗೈರೆಯವರ ಆಸ್ತಿಗಳು, ಉತ್ತರಕ್ಕೆ : ದಾರಿ, ದಕ್ಷಿಣಕ್ಕೆ : ಶಿರಮಗೊಂಡನಹಳ್ಳಿ ಗಡಿ ಹಾಗೂ ಹಲ್ಲುಮನಿ ರಾಮಪ್ಪರ ಆಸ್ತಿ.

3) ದಾವಣಗೆರೆ ಜಿಲ್ಲೆ, ದಾವಣಗೆರೆ ನಗರ ಶಾಮನೂರು ಗ್ರಾಮದಲ್ಲಿರುವ ಮೂಲ ಆಸ್ತಿ ಸಂಖ್ಯೆ 202 ಅಂತಾ ಇರುವ ಆಸ್ತಿ ವಿಸ್ತೀರ್ಣ ಪೂರ್ವ-ಪಶ್ಚಿಮ 70 ಅಡಿ, ಉತ್ತರ-ದಕ್ಷಿಣ 30 ಅಡಿ ಒಟ್ಟು ವಿಸ್ತೀರ್ಣ 2100 ಚದುರ ಅಡಿಯಲ್ಲಿ ವಾಸದ ಮನೆ ಹಾಗೂ ಖಾಲಿ ಜಾಗ ಸೇರಿ ಇರುವ ಒಟ್ಟು ಆಸ್ತಿಗೆ ಚೆಕ್ಕುಬಂದಿ : (ಮಹಾನಗರ ಪಾಲಿಕೆಯಲ್ಲಿ ತಪ್ಪಾಗಿ 31x18 ಅಡಿ ಅಂತಾ ತೋರಿಸಿರುತ್ತಾರೆ) ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಕನ್ಸರ್‌ವೆನ್ಸಿ, ಉತ್ತರಕ್ಕೆ ಬಿಂದಪ್ಪರ ಚಂದ್ರಣ್ಣನವರ ಮನೆ, ದಕ್ಷಿಣಕ್ಕೆ : ಸಂಕೋಳ್ ಶಿವಪ್ಪರ ಮನೆ.

**ಪ್ರಕಾಶ್ ಪಾಟೀಲ್.**, ಬಿ.ಎ., ಎಲ್.ಎಲ್.ಬಿ.,
**ಸುಷ್ಮಾ ಪಾಟೀಲ್.**, ಬಿ.ಎ., ಎಲ್.ಎಲ್.ಬಿ.,
ವಕೀಲರು ಮತ್ತು ಗೌರವ ಪಂಚಾಯಿತಿದಾರರು,
ಅನ್ನಪೂರ್ಣ ನಿಲಯ, ಮನೆ ನಂ. 87/1, 7ನೇ ಕ್ರಾಸ್,
ಜಿಲ್ಲಾ ನ್ಯಾಯಾಲಯ ಸಂಕೀರ್ಣದ ಹಿಂಭಾಗ, ಎ-ಬ್ಲಾಕ್,
ಶ್ರೀ ಡಿ. ದೇವರಾಜ ಅರಸ್ ಬಡಾವಣೆ,
ದಾವಣಗೆರೆ-577006.
Mob No : 94483 58831

**ಶ್ರೀ ಕೆ.ಎಂ ಪ್ರಭು ಬಿನ್.ಕೆ.ಬಿ ಮಹೇಶ್ವರಪ್ಪ**
ವಾಸ : ಶಿರಮಗೊಂಡನಹಳ್ಳಿ
ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ.





NEET - 2020 RESULT
NEET MARKS 703 / 720



NISARGA H. S.
JIPMER, Pondichery

Top Medical Ranks From SIR M V
7 16 26 34 42 54 69 101 103 106 109 117 121 130 151

SIR MV is the only Institution which has made the dreams of Medical aspirants come true by procuring 124, 143, 158, 200 Medical seats in the consecutive years through NEET

SIR M V NEET LONGTERM Coaching - 2023

SIR MV made the dream of Medical come true for more than 200 Students in NEET-2021

NEET - 2021 RESULT
NEET MARKS 677 / 720
703 *CAT Rank
ALL INDIA RANK 1092



VENKATESH G.P.

NEET Marks out of 720
Above 650 marks 4 students
Above 600 marks 21 students
Above 550 marks 60 students
Above 500 marks 126 students
Above 450 marks 195 students

Expected number of free Medical seats is more than 250 in NEET-2021 from single campus

Subject wise highest marks in NEET-2021
Biology 360/360 Chemistry 167/180 Physics 165/180

Commences on 20th Aug.2022
Reserve your seat
Limited Hostel facility Available

SIR M V Academy
Near Govt. ITI College, Hadadi Road, DAVANGERE-577 005. Ph: 08192-261200 Mob : 9243312223, 8099995631, 8722141400
Kuvempu Extn., 'A' Block, Chatnahalli, SHIVAMOGGA-577 201 Ph: 9148684483, 8088350265, 9035141142

## ಶೇರಾಪುರ ನಿವೇಶನ; ಆರ್ಥಿಕವಾಗಿ ಹಿಂದುಳಿದರಿಗೆ ಮಾತ್ರ ರಿಯಾಯಿತಿ

ಹರಿಹರ,ಜು.24- ಕರ್ನಾಟಕ ಗೃಹ ಮಂಡಳಿ ಶೇರಾಪುರ-ಹರಿಹರ ಬಡಾವಣೆ ನಿವೇಶನಗಳು ಹಂಚಿಕೆಗೆ ಲಭ್ಯ ಎಂಬ ಪತ್ರಿಕೆಯಲ್ಲಿ ಬಂದಿರುವ ವರದಿಯಲ್ಲಿ ಎಸ್ಸಿ,ಎಸ್ಟಿ ವರ್ಗದವರಿಗೆ ದರ ರೂ.400 ಚದುರ ಅಡಿ ಎಂದಿದ್ದು, ಈ ವರ್ಗದವರಿಗೆ ನಿವೇಶನ ಹಂಚಿಕೆಯಲ್ಲಿ ಮೀಸಲಾತಿ ಇರುತ್ತದೆಯೇ ಹೊರತು ದರದಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ ಎಂದು ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಸ್ಪಷ್ಟನೆ ನೀಡಿದ್ದಾರೆ.

ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮಾತ್ರ ದರದಲ್ಲಿ ರಿಯಾಯಿತಿ ಇರುತ್ತದೆ ಎಂದು ಅವರು ತಿಳಿಸಿದ್ದು, ಈ ಬಡಾವಣೆಯ ನಿವೇಶನಗಳಿಗೆ ಈಗಾಗಲೇ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಿದ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಬಿಡುಗಡೆಗೊಳಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ಆಗಸ್ಟ್ 2 ಅಂತಿಮ ದಿನವಾಗಿರುತ್ತದೆ. ಆಗಸ್ಟ್ 17 ರಂದು ಲಾಟರಿ ಮೂಲಕ ವಿತರಣೆಗೆ ದಿನಾಂಕ ನಿಗದಿಯಾಗಿರುತ್ತದೆ ಎಂದು ಅವರು ತಿಳಿಸಿದ್ದಾರೆ.

## ನಿಟ್ಟೂರ ಸೆಂಟ್ರಲ್ ಸ್ಕೂಲ್‌ಗೆ ಶೇ. 100





ರಾಣೆಬೆನ್ನೂರು, ಜು. 24 - ಇಲ್ಲಿನ ನಿಟ್ಟೂರ ಸೆಂಟ್ರಲ್ ಸ್ಕೂಲ್ ಸಿ.ಬಿ.ಎಸ್.ಸಿ ಫಲಿತಾಂಶ ಶೇ. ನೂರರಷ್ಟಾಗಿದ್ದು, ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿರುವ ತಮ್ಮ ವಿದ್ಯಾರ್ಥಿಗಳನ್ನು ಅಧ್ಯಕ್ಷ ವೆಂಕಟೇಶ ನಿಟ್ಟೂರ ಹಾಗೂ ಪ್ರಾಂಶುಪಾಲರಾದ ಲತಾ ನಿಟ್ಟೂರ ಅಭಿನಂದಿಸಿದ್ದಾರೆ. ದೀಪ್ತಿ ಲೋನಿ ಶೇ.98.4, ಚಿನ್ಮಯಿ ಕುಲ್ಕರ್ಣಿ ಶೇ 97.6 ಅಂಕ ಪಡೆದಿದ್ದಾರೆ. ಅಲೋಕ ಹುಡೇದ, ಚಂದನ ನಾಯ್ಕ ಗಣಿತದಲ್ಲಿ, ಪ್ರತೀಕ ಪಾಟೀಲ ಹಾಗೂ ಶರ್ಮಿಳಾ ವಿಜ್ಞಾನದಲ್ಲಿ ಶೇಕಡಾ ನೂರರಷ್ಟು ಅಂಕ ಗಳಿಸಿದ್ದಕ್ಕೆ ಬೋಧಕ, ಬೋಧಕೇತರ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

## ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ಅವಿನಾಶ್‌ರಾವ್‌ಗೆ ಇಂದು ಸನ್ಮಾನ

ಯುಪಿಎಸ್‌ಸಿ-ಸಿಎಸ್‌ಇ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಜಿಲ್ಲೆಗೆ, ರಾಜ್ಯಕ್ಕೆ ಒಳ್ಳೆಯ ಕೀರ್ತಿ ತಂದಿರುವ ಅವಿನಾಶ್ ರಾವ್ ಅವರಿಗೆ ಅನ್‌ಮೋಲ್ ಪಬ್ಲಿಕ್ ಶಾಲೆ ಹಾಗೂ ಅನ್‌ಮೋಲ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಸನ್ಮಾನ ಏರ್ಪಡಿಸಲಾಗಿದೆ ಹಾಗೂ ಅವಿನಾಶ್‌ರಾವ್ ಅವರಿಂದ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ.

# ಸರ್ಕಾರಿ ನೌಕರಿಗೆ ಆಸೆ ಪಡದೇ ಸ್ವ-ಉದ್ಯೋಗ ಮಾಡಿ ಮುಖ್ಯ ವಾಹಿನಿಗೆ ಬರಬೇಕು



**ಹರಪನಹಳ್ಳಿ : ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಭೋವಿ ಗುರು ಪೀಠದ ಶ್ರೀ ಇಮ್ಮಡಿ ಸಿದ್ದ ರಾಮೇಶ್ವರ ಸ್ವಾಮೀಜಿ**

ಹರಪನಹಳ್ಳಿ, ಜು.24- ಇಂದಿನ ಯುವ ಸಮೂಹ ಉತ್ತಮ ಶಿಕ್ಷಣ ಪಡೆದು ಸರ್ಕಾರಿ ನೌಕರಿಗೆ ಆಸೆ ಪಡದೇ ಸ್ವ-ಉದ್ಯೋಗ ಮಾಡುವ ಮೂಲಕ ಮುಖ್ಯ ವಾಹಿನಿಗೆ ಬರಬೇಕು ಎಂದು ಚಿತ್ರದುರ್ಗ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದ ರಾಮೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ತಾಲ್ಲೂಕು ಭೋವಿ ಸಮಾಜದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ದೇಶದ ಭವಿಷ್ಯ ಯುವಕರ ಮೇಲೆ ನಿಂತಿದ್ದು, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಯುವಕರು ಸೋಮಾರಿತನ ರೂಢಿಸಿಕೊಳ್ಳದೆ ಕ್ರಿಯಾಶೀಲರಾಗಿ ಜೀವನ ನಡೆಸಬೇಕು. ಶಿಕ್ಷಣದ ಜೊತೆಗೆ ವಿನಯತೆ ಕಲಿಯಬೇಕು, ತಂದೆ-ತಾಯಿಗೆ ತಕ್ಕ ಮಗನಾಗಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಜಿ. ಕರುಣಾಕರ ರೆಡ್ಡಿ, ಭೋವಿ ಸಮಾಜದ ಬಂಧುಗಳು ಶ್ರಮ ಜೀವಿಗಳಾಗಿದ್ದು, ಮನೆ ಕಟ್ಟುವ, ಸೇತುವೆ ನಿರ್ಮಾಣ ಮಾಡುವ ಕೆಲಸ ಮಾಡುತ್ತಿದ್ದು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಮುಖ್ಯವಾಹಿನಿಗೆ ಬರಬೇಕಿದೆ ಎಂದರು.

ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಕೆಳವರ್ಗದ ಸಮುದಾಯದಲ್ಲಿ ಅನಕ್ಷರತೆಯ ಪ್ರಮಾಣ ಹೆಚ್ಚಿರುವುದರಿಂದ ಅವರಿಗೆ ಶಿಕ್ಷಣದ ಅರಿವು ಮೂಡಿಸುವ ಅಗತ್ಯತೆ ಇದ್ದು, ಶಿಕ್ಷಣದಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ. ಆ ನಿಟ್ಟಿನಲ್ಲಿ ಭೋವಿ ಸಮಾಜದವರು ಮಕ್ಕಳಿಗೆ ಶಿಕ್ಷಣ ನೀಡಬೇಕಿದೆ ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಮಾತನಾಡಿ, ಪರಿಶ್ರಮದ ಜೀವನ ನಡೆಸುವ ಭೋವಿ ಸಮಾಜ ರಾಜಕೀಯ, ಶೈಕ್ಷಣಿಕ, ಆರ್ಥಿಕವಾಗಿ ಮುಖ್ಯವಾಹಿನಿಗೆ ಬರಬೇಕು ಎಂದರು.

ಭೋವಿ ಸಮಾಜದ ರಾಜ್ಯ ಅಧ್ಯಕ್ಷ ಎಚ್. ಆನಂದಪ್ಪ, ಗಜೇಂದ್ರ ಗಡದ ಅರವಿಂದ್ ವಡ್ಡರ್, ಚುನಾವಣೆ ಉಸ್ತುವಾರಿಗಳಾದ ಕವಿತಾ ರೆಡ್ಡಿ, ಕರ್ನಾಟಕ ರೇಷ್ಮೆ ನಿಗಮದ ಮಾಜಿ ಅಧ್ಯಕ್ಷ ಡಿ. ಬಸವರಾಜ್, ಅಂಬೇಡ್ಕರ್ ಸಮಾಜದ ತಾಲ್ಲೂಕು ಅಧ್ಯಕ್ಷ ನಿಚ್ಚವನಹಳ್ಳಿ ಭೀಮಪ್ಪ, ಭೋವಿ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಬಿ. ಅಂಜಿನಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷ ಹರಾಳ್ ಅಶೋಕ್, ತಾಲ್ಲೂಕು ಭೋವಿ ಸಮಾಜದ ಮಾಜಿ ಅಧ್ಯಕ್ಷರುಗಳಾದ ಎಂ.ವಿ. ಅಂಜಿನಪ್ಪ, ಚಟ್ನಿಹಳ್ಳಿ ವಿ.ರಾಜಪ್ಪ, ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಕುರುಬ ಸಮಾಜದ ತಾಲ್ಲೂಕು ಅಧ್ಯಕ್ಷ ಬಿ. ಗೋಣಿಬಸಪ್ಪ, ಕೊರಚ, ಕೊರಮ ಸಮಾಜದ ತಾಲ್ಲೂಕು ಅಧ್ಯಕ್ಷ ಅಶೋಕ್, ಚಲವಾದಿ ಸಮಾಜದ ತಾಲ್ಲೂಕು ಅಧ್ಯಕ್ಷ ಪರಶುರಾಮ, ಬಿಜೆಪಿ ಎಸ್.ಟಿ. ಘಟಕದ ತಾಲ್ಲೂಕು ಅಧ್ಯಕ್ಷ ಟಿ. ಮನೋಜ್, ಪುರಸಭೆ ಸದಸ್ಯ ದ್ಯಾಮಜ್ಜಿ ರೊಕ್ಕಪ್ಪ, ಶಿಕ್ಷಕ ವಿ. ಹನುಮಂತಪ್ಪ, ನೀಲಗುಂದ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹನುಮವ್ವ ರಾಮಪ್ಪ, ಹೊಸಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕವಿತಾ ವೀರೇಶ್, ಮುಖಂಡರುಗಳಾದ ಆರ್. ಲೋಕೇಶ್, ಕಣಿವಿಹಳ್ಳಿ ಮಂಜುನಾಥ್, ಮಂಜುನಾಥ್, ವಿ. ಸಂಪತ್, ಎಂ.ವಿ. ಕೃಷ್ಣಕಾಂತ್, ಎಂ.ವಿ. ತಿಪ್ಪೇಶ್, ಮಹಾತೇಂಶ ಸೇರಿದಂತೆ, ಇತರರು ಇದ್ದರು.

## ಖಾಸಗಿ ಶಾಲೆಗಳಲ್ಲಿ ಶೈಕ್ಷಣಿಕ ಬಲವರ್ಧನೆಗಾಗಿ ನಗರದಲ್ಲಿ ಇಂದು ರಾಜ್ಯಮಟ್ಟದ ಚಿಂತನ-ಮಂಥನ

ದಾವಣಗೆರೆ, ಜು. 24- ರುಪ್ಸ ಕರ್ನಾಟಕ ಮತ್ತು ದಾವಣಗೆರೆ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ಖಾಸಗಿ ಶಾಲೆಗಳಲ್ಲಿ ಶೈಕ್ಷಣಿಕ ಬಲವರ್ಧನೆಗಾಗಿ ನಾಳೆ ದಿನಾಂಕ 25 ರ ಸೋಮವಾರ ಬೆಳಿಗ್ಗೆ 10.30 ಕ್ಕೆ ನಗರದ ಬಂಟರ ಭವನದಲ್ಲಿ ರಾಜ್ಯಮಟ್ಟದ ಚಿಂತನ-ಮಥನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಸಂಚಾಲಕ ಕೆ.ಎಸ್. ಪ್ರಭುಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಮಹಾ ನಿರ್ದೇಶಕ ಡಾ. ಅಮರ್ ಕುಮಾರ್ ಪಾಂಡೆ ಕಾರ್ಯಕ್ರಮ ಉದ್ಘಾಟಿಸುವರು. ರುಪ್ಸ ಕರ್ನಾಟಕ ಇದರ ರಾಜ್ಯಾಧ್ಯಕ್ಷ ಲೋಕೇಶ್ ತಾಳಿಕಟ್ಟೆ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಲೋಕೋಪಯೋಗಿ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಾ. ಕೆ.ಎಸ್. ಕೃಷ್ಣಾರೆಡ್ಡಿ ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾಥಮಿಕ ಶಿಕ್ಷಣ ವಿಭಾಗದ ನಿರ್ದೇಶಕ ಎಂ.ಎಸ್. ಪ್ರಸನ್ನಕುಮಾರ್ ಆಗಮಿಸಲಿದ್ದಾರೆ.

ರುಪ್ಸ ಗೌರವಾಧ್ಯಕ್ಷ ಚಂದ್ರಕಾಂತ್ ಭಂಡಾರೆ, ಡಿಎಎಂಎಸ್ ಅಧ್ಯಕ್ಷ ಟಿ.ಎಂ. ಉಮಾಪತಯ್ಯ, ಕಾರ್ಯಾಧ್ಯಕ್ಷ ಕೆ.ಸಿ. ಲಿಂಗರಾಜು, ರುಪ್ಸ ಕಾರ್ಯದರ್ಶಿ ಎನ್.ಎಂ. ಲೋಕೇಶ್, ಜಂಟಿ ಕಾರ್ಯದರ್ಶಿ ಉಮಾಶಂಕರ್, ಡಿಎಎಂಎಸ್ ಕಾರ್ಯದರ್ಶಿ ರಾಮಮೂರ್ತಿ, ಡಯಟ್ ಪ್ರಾಚಾರ್ಯ ಹೆಚ್.ಕೆ. ಲಿಂಗರಾಜ್, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಂ. ನಿರಂಜನಮೂರ್ತಿ, ಟಿ. ಅಂಬಣ್ಣ, ಮಂಜುನಾಥ್, ಬಿ. ಉಮಾದೇವಿ, ಬಿ.ಸಿ. ಸಿದ್ಧಪ್ಪ, ಎಂ. ಮಂಜುನಾಥ ಸ್ವಾಮಿ ಭಾಗವಹಿಸಲಿದ್ದಾರೆ ಎಂದು ವಿವರಣೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಟಿ.ಎಂ. ಉಮಾಪತಯ್ಯ, ಕೆ.ಎಸ್. ಮಂಜುನಾಥ್ ಅಗಡಿ, ಸಿ. ರಾಮಮೂರ್ತಿ, ಹೆಚ್. ಜೆ. ಮೈನುದ್ದೀನ್ ಉಪಸ್ಥಿತರಿದ್ದರು.

## ನಗರಕ್ಕೆ ಇಂದು ಎಐಸಿಸಿ ಕಾರ್ಯದರ್ಶಿ ಮಯೂರ್ ಜಯಕುಮಾರ್

ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಮಯೂರ್ ಜಯಕುಮಾರ್ ಅವರು ಇಂದು ಸಂಜೆ 4 ಗಂಟೆಗೆ ಪಕ್ಷದ ಕಚೇರಿಗೆ ಆಗಮಿಸಿ, ಜಿಲ್ಲೆಯ ಮುಖಂಡರ ಸಭೆ ನಡೆಸುವರು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷ ಎಚ್.ಬಿ ಮಂಜಪ್ಪ ವಹಿಸುವರು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ ತಿಳಿಸಿದ್ದಾರೆ.

## ಸೇವಾದಳ ಸಾಂಸ್ಕೃತಿಕ ಭವನದಲ್ಲಿ ರಾಷ್ಟ್ರಧ್ವಜ ಅಂಗೀಕಾರ ದಿವಸ ಆಚರಣೆ



ದಾವಣಗೆರೆ,ಜು.24- ನಗರದ ಭಾರತ ಸೇವಾದಳ ಸಾಂಸ್ಕೃತಿಕ ಭವನದಲ್ಲಿ ಮೊನ್ನೆ ಭಾರತೀಯ ರಾಷ್ಟ್ರಧ್ವಜ ಅಂಗೀಕಾರ ದಿವಸವನ್ನು ಆಚರಿಸಲಾಯಿತು.

ಜುಲೈ 22, 1947 ರಂದು ನೆಹರೂ ಅವರು ಭಾರತಕ್ಕೆ ತ್ರಿವರ್ಣ ಧ್ವಜವನ್ನು ಪರಿಚಯಿಸಿ, ಇನ್ನು ಮುಂದೆ ಇದು ನಮ್ಮ ಭಾರತದ ರಾಷ್ಟ್ರಧ್ವಜವಾಗಲಿದೆ ಎಂದರು. ಇದರ ಸ್ಮರಣಾರ್ಥ ಇಂದು ಭಾರತ ಸೇವಾದಳ ಭವನದಲ್ಲಿ ರಾಷ್ಟ್ರಧ್ವಜದ ಅಂಗೀಕಾರ ದಿವಸವನ್ನು ಆಚರಿಸಲಾಗಿದ್ದು, ಜಿಲ್ಲಾಧ್ಯಕ್ಷ ಪ್ರೊ. ಚನ್ನಪ್ಪ ಪಲ್ಲಾಗಟ್ಟೆ, ಜಿಲ್ಲಾ ಕಾರ್ಯದರ್ಶಿ ಅರವಿಂದ ಜೆ. ಕೂಲಂಬಿ, ಕೋಶಾಧ್ಯಕ್ಷ ಎಂ.ರುದ್ರಯ್ಯ, ಕೇಂದ್ರ ಸಮಿತಿ ಸದಸ್ಯರಾದ ಟಿ. ನಾಗರಾಜ್, ವಲಯ ಸಂಘಟಕ ಅಣ್ಣಯ್ಯ ಎಂ., ಡಾ. ಚಂದ್ರಪ್ಪ, ಕೆ.ಟಿ. ಜಯಪ್ಪ. ಕೆ. ಬಿ.ಪರಮೇಶ್ವರಪ್ಪ, ಹನುಮಂತಪ್ಪ, ಸಂಗಮೇಶ್, ಶ್ರೀಕಾಂತ್ ಉಪಸ್ಥಿತರಿದ್ದರು.

## ರಾಣೇಬೆನ್ನೂರಿನಲ್ಲಿ ಇಂದು ರೈತರ ಬೃಹತ್ ಪ್ರತಿಭಟನೆ

ಬೆಳೆ ವಿಮೆ ಜಾರಿ, ಬೆಳೆ ವಿಮೆಯಲ್ಲಾದ ಗೋಲ್‌ಮಾಲ್ ತನಿಖೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ರೈತರ ಬೃಹತ್ ಪ್ರತಿಭಟನಾ ಮೆರವಣಿಗೆ ರಾಣೇಬೆನ್ನೂರಿನ ಕೆಇಬಿ ಗಣೇಶ ದೇವಸ್ಥಾನದಿಂದ ಪಿ.ಬಿ. ರಸ್ತೆಯವರೆಗೆ ರಸ್ತೆ ತಡೆ ನಡೆಯಲಿದೆ.

## ನಗರದಲ್ಲಿಂದು ಸಂಶೋಧನಾ ಕೃತಿ ಲೋಕಾರ್ಪಣೆ

ಗೌಡ್ರ ವಂಶಸ್ಥರು, ಗ್ರಾಮಸ್ಥರು ಬಸವನಕೋಟೆ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತಾಶ್ರಯದಲ್ಲಿ ಜಿ.ಎಸ್. ಸಿದ್ದೇಶ್ ಅವರ 'ಶ್ರೀ ಬೊಮ್ಮಲಿಂಗೇಶ್ವರ ಭಕ್ತರ ಹಿನ್ನೆಲೆ' ಸಂಶೋಧನಾ ಲೇಖನದ ಲೋಕಾರ್ಪಣೆ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಜರುಗಲಿದೆ.

ಶಾಸಕ ಎಸ್.ಎ.ರವೀಂದ್ರನಾಥ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದು, ಶಾಸಕ ಎಸ್.ವಿ.ರಾಮಚಂದ್ರ ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ.

ಲೇಖಕರ ಕುರಿತು ಮಾಜಿ ಶಾಸಕ ಟಿ. ಗುರುಸಿದ್ಧನಗೌಡ ಹಾಗೂ ಪುಸ್ತಕ ಕುರಿತು ಕನ್ನಡ ಉಪನ್ಯಾಸಕ ಬಸವರಾಜ ಹನುಮಲಿ ಮಾತನಾಡುವರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಬಿ. ವಾಮದೇವಪ್ಪ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವರು.

ಮುಖ್ಯ ಅತಿಥಿಗಳಾಗಿ ಡಾ. ಹೆಚ್.ವಿ. ವಾಮದೇವಪ್ಪ, ಎ.ಆರ್.ಉಜ್ಜನಪ್ಪ, ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ, ಪ್ರೊ.ಸಿ.ಹೆಚ್. ಮುರಿಗೇಂದ್ರಪ್ಪ, ಬಿ.ಎಸ್. ಸಿದ್ದೇಶ್ ಭಾಗವಹಿಸುವರು.

## ಕಿಡ್ನಿ ವೈಫಲ್ಯ : ಗ್ರಾಮಸ್ಥರ ಸಹಾಯ



ಸಾಸ್ವೆಹಳ್ಳಿ, ಜು. 24 - ಹೊನ್ನಾಳಿ ತಾಲ್ಲೂಕಿನ ಅರಬಗಟ್ಟೆ ಗ್ರಾಮದ ಕೆ.ಎನ್.ದೇವರಾಜ್ (23) ಡಿಪ್ಲೋಮಾ ಮುಗಿಸಿ ಕೆಲಸ ಮಾಡುವಾಗ ಅನಾರೋಗ್ಯ ಕಾಣಿಸಿಕೊಂಡಿದೆ. ಆ ಯುವಕನನ್ನು ಕಸ್ತೂರಿ ಬಾ ಆಸ್ಪತ್ರೆ ಮಣಿಪಾಲ್ ನಲ್ಲಿ ದಾಖಲಿಸಿ, ಪರೀಕ್ಷಿಸಿದಾಗ ಎರಡೂ ಕಿಡ್ನಿಗಳು ವಿಫಲವಾಗಿರುವುದು ತಿಳಿದು ಬಂತು.

ಆತನ ತಂದೆ ನಂಜುಂಡಪ್ಪ ಬಡವನಾಗಿದ್ದು ಕೇವಲ ಒಂದುಕಾಲು ಎಕರೆ ಭೂಮಿಯಲ್ಲಿ ಒಣ ಬೇಸಾಯವನ್ನೇ ನಂಬಿಕೊಂಡಿದ್ದಾರೆ. ತನ್ನ ಮಗ ಬದುಕಿದರೆ ಸಾಕು ಎನಿಸಿ ತನ್ನ ಕಿಡ್ನಿಯನ್ನು ಮಗನಿಗೆ ನೀಡಿದ್ದಾರೆ. ಡಯಾಲಿಸೀಸ್ ಸೇರಿ ಇತರೆ ಒಟ್ಟು ಈಗ ರೂ. 15 ಲಕ್ಷಕ್ಕೂ ಅಧಿಕ ಖರ್ಚಾಗಿರುತ್ತದೆ.

ದೇವರಾಜ್ ನ ತಾಯಿ ಬಸಮ್ಮ ಹನುಮನಹಳ್ಳಿ ಗ್ರಾಮದವರಾಗಿದ್ದು, ತನ್ನ ತವರೂರಿನ ಜನರ ಸಹಾಯಹಸ್ತ ಕೇಳಿದಾಗ ಗ್ರಾಮದ ಕೂಲಿ ಕಾರ್ಮಿಕ, ಶಿಕ್ಷಕ, ಟೈಲರ್, ರೈತ, ಎಲ್ಲಾ ಶ್ರಮಿಕ ವರ್ಗದವರು ತಮ್ಮ ಕೈಲಾದ ಹಣ ಸಹಾಯ ಮಾಡಿ ಹಾವೇರಿ ಜಿಲ್ಲೆಯ ಲೋಕಾಯುಕ್ತ ಡಿವೈಎಸ್ಪಿ ಬಿ.ಪಿ ಚಂದ್ರಶೇಖರ್ ನೇತೃತ್ವದಲ್ಲಿ ಹಣ ನೀಡಿದರು.

ಡಿವೈಎಸ್ಪಿ ಚಂದ್ರಶೇಖರ್ ಬಿ.ಪಿ ಮಾತನಾಡಿದರು. ಸಹಾಯ ಮಾಡಲು ಇಚ್ಛೆ ಉಳ್ಳವರು. ಆತನ ಬ್ಯಾಂಕ್ ಖಾತೆ ಸಂಖ್ಯೆ 0584119015160, ಐಎಫ್ ಎಸ್ ಸಿ ಕೋಡ್ : CNRB 0000584, ಕೆನರಾಬ್ಯಾಂಕ್ ಚೀಲೂರು ಶಾಖೆಗೆ ಅಥವಾ ಫೋನ್ ಫೇ ನಂಬರ್ 9148626425 ಸಂದಾಯ ಮಾಡಿ ಎಂದು ಮನವಿ ಮಾಡಿದರು.

# ನಮ್ಮೊಳಗೆ ಅಂಬೇಡ್ಕರ್, ಬುದ್ಧ ಇದ್ದರೆ ಬಹುತ್ವ, ಬಲಿಷ್ಠ ಭಾರತ ಕಟ್ಟಲು ಸಾಧ್ಯ

**ನಿವೃತ್ತ ಪ್ರಾಚಾರ್ಯ ಪ್ರೊ. ಎ.ಬಿ. ರಾಮಚಂದ್ರಪ್ಪ ಅಭಿಮತ**



ದಾವಣಗೆರೆ, ಜು.24- ನಮ್ಮೊಳಗೆ ಅಂಬೇಡ್ಕರ್, ಬುದ್ಧ ಇದ್ದರೆ ಶಾಂತಿಯುತವಾಗಿ, ಅಹಿಂಸಾತ್ಮಕವಾಗಿ ಉತ್ತರ ನೀಡಬಹುದು. ಅಲ್ಲದೇ, ದೇಶದ ಭ್ರಾತೃತ್ವ, ಸಹೋದರತ್ವ, ಬಹುತ್ವದ, ಬಲಿಷ್ಠ ಭಾರತವನ್ನು ಕಟ್ಟಲು ಸಾಧ್ಯ ಎಂದು ನಿವೃತ್ತ ಪ್ರಾಚಾರ್ಯ ಪ್ರೊ. ಎ.ಬಿ. ರಾಮಚಂದ್ರಪ್ಪ ತಿಳಿಸಿದರು.

ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿನ ಛಲವಾದಿ ಮಹಾಸಭಾ ಭವನದಲ್ಲಿ ಇಂಟರ್ ನ್ಯಾಷನಲ್ ಫ್ರೆಂಡ್ಸ್ ಆಫ್ ಬುದ್ದಿಸ್ಟ್ ಸೋಷಿಯಲ್, ಎಜುಕೇಷನ್, ಕಲ್ಚರಲ್ ಅಂಡ್ ಚಾರಿಟಬಲ್ ಟ್ರಸ್ಟ್, ದಾವಣಗೆರೆ ಜಿಲ್ಲಾ ಛಲವಾದಿ ಮಹಾಸಭಾ ಆಶ್ರಯದಲ್ಲಿ 2566ನೇ ಬುದ್ಧ ಜಯಂತಿ ಹಾಗೂ 131ನೇ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಇಂದು ಏರ್ಪಾಡಾಗಿದ್ದ ಉಚಿತ ನೇತ್ರ ತಪಾಸಣೆ ಶಿಬಿರ ಮತ್ತು ಬುದ್ಧ ವಂದನಾ ಪೂಜಾ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕುರಿತು ಅವರು ಮಾತನಾಡಿದರು.

ಅಂಬೇಡ್ಕರ್ ನಮ್ಮೊಳಗೆ ಪ್ರವೇಶ ಮಾಡಿದಾಗ, ಬುದ್ಧ ಮರುಹುಟ್ಟನ್ನು ಪಡೆದುಕೊಂಡರೆ ಹಿಂಸೆ, ದ್ವೇಷಗಳು ಸುಳಿಯಲ್ಲ. ಯಜ್ಞಗಳ ಮಾಡಿದರೆ ಪುಣ್ಯ ಬರುತ್ತದೆ, ಮಾಡದಿದ್ದರೆ ಬರಲ್ಲ ಎಂಬುದಾಗಿ ನಮ್ಮ ತಲೆಯೊಳಗೆ ಭ್ರಮೆಯನ್ನು ತುಂಬಲಾಗಿದೆ. ನಮಗೆ ಪುರೋಹಿತ ಶಾಹಿಗಳು ಬೇಕಾಗಿಲ್ಲ. ನಮ್ಮ ಸಂಸ್ಕೃತಿಯನ್ನು ಉಳಿಸುವಂತಹವರು ನಾವಾಗಬೇಕು. ಬುದ್ಧನ ಮೂರ್ತಿ, ಅಂಬೇಡ್ಕರ್ ಭಾವಚಿತ್ರವನ್ನು ಇಟ್ಟು ನಮನ, ಪೂಜಿಸುವುದಕ್ಕಿಂತ ದೊಡ್ಡದು ಬೇರೊಂದಿಲ್ಲ ಎಂದು ಹೇಳಿದರು.

ಬೌದ್ಧ ಧರ್ಮದ ಪ್ರಸಾರವೆಂದರೆ ಮನುಕುಲದ ಸೇವೆ ಮಾಡಿದಂತೆ ಎಂಬ ವಿಷಯವಾಗಿ ಮಾತನಾಡಿದ ಐಎನ್‌ಎಫ್‌ಬಿ ಟ್ರಸ್ಟ್‌ನ ವ್ಯವಸ್ಥಾಪಕ ಡಾ. ಹೆಚ್.ಆರ್. ಸುರೇಂದ್ರ, ಅಂಬೇಡ್ಕರ್ ಅವರಿಗೆ ಸರಿಸಾಟಿ ಯಾರೂ ಇಲ್ಲ. ಅವರು ಜಗತ್ತಿಗೆ ಜೀವನದ ದಾರಿಯನ್ನು ತೋರಿಸಿದಂತಹ ಮಹಾನ್ ವ್ಯಕ್ತಿ. ಅಷ್ಟೇ ಅಲ್ಲ ಅದ್ಭುತ ಶಕ್ತಿ. ಅಂಬೇಡ್ಕರ್ ಅವರ ಆದೇಶಗಳು, ಸಂದೇಶಗಳು ಶತ ಶತಮಾನಗಳೇ ಕಳೆದರೂ ಸತ್ಯ ಮತ್ತು ಜೀವಂತ ಎಂದರು.

ಬುದ್ಧನ ತತ್ವಗಳು ಇಡೀ ವಿಶ್ವಕ್ಕೇ ಬಹಳ ಮುಖ್ಯವಾದದ್ದು. ಇಡೀ ಪ್ರಪಂಚಕ್ಕೇ ತ್ಯಾಗ ಮಾಡಬೇಕು, ಬುದ್ಧನ ತತ್ವಗಳನ್ನು ಪ್ರಚಾರ ಮಾಡಬೇಕು, ಮಾನವೀಯ ಮೌಲ್ಯಗಳನ್ನು ಉಳಿಸಬೇಕು, ಮಾನವೀಯತೆಯನ್ನು ಎಲ್ಲರೊಳಗೂ ಸಾಧಿಸಬೇಕು. ಜಾತಿ, ಧರ್ಮ, ಭಾಷೆ, ಪ್ರದೇಶ ಮುಖ್ಯವಲ್ಲ. ಬೌದ್ಧ ಧರ್ಮವು ಜಾತಿ, ಧರ್ಮ, ತತ್ವಶಾಸ್ತ್ರ, ಮನೋವಿಜ್ಞಾನ, ಸಂಸ್ಕೃತಿ, ಸಂಪ್ರದಾಯಕ್ಕಿಂತ ಮಿಗಿಲಾದದ್ದು ಎಂದು ಅಂಬೇಡ್ಕರ್ ಅವರೇ ಹೇಳಿದ್ದಾರೆ. ಎಲ್ಲರಿಗೂ ಶಾಂತಿ ಮತ್ತು ಸಂತೋಷ ಇರಬೇಕೆಂಬುದನ್ನು ಬುದ್ಧನ ತತ್ವ ಸಾರಲಿದೆ. ಸಮೃದ್ಧಿ, ಶಾಂತಿಯುತವಾದ ಮನಸ್ಸು ಮತ್ತು ಬದುಕು ಕಟ್ಟಿಕೊಂಡು ಬಾಳಬೇಕು ಎಂಬುದೇ ಬೌದ್ಧ ಧರ್ಮದ ಸಂಕೇತ ಎಂದರು.

ಕಾರ್ಯಕ್ರಮದಲ್ಲಿ ಬಂತೇಜಿ ಬಿಕ್ಕುಣಿ ಬುದ್ಧಮ್ಮ ಸಾನ್ನಿಧ್ಯ ವಹಿಸಿದ್ದರು. ಐಎನ್‌ಎಫ್‌ಬಿ ಟ್ರಸ್ಟ್ ಮಕ್ಕಳ ಮಿತ್ರ ಅಧ್ಯಕ್ಷ ಡಿ.ಎನ್.ಹಾಲೇಶ್ ನಲ್ಕುದುರೆ ಅಧ್ಯಕ್ಷತೆ ವಹಿಸಿದ್ದರು.

ಮೇಯರ್ ಜಯಮ್ಮ ಗೋಪಿನಾಯ್ಕ, ಎನ್. ರುದ್ರಮುನಿ, ಜಿಲ್ಲಾ ಛಲವಾದಿ ಮಹಾಸಭಾದ ಅಧ್ಯಕ್ಷ ಎಸ್.ಶೇಖರಪ್ಪ, ಹೆಚ್. ವಸಂತ್, ಡಾ.ಸುರೇಶ್ ಹನಗವಾಡಿ, ಜಿ.ರಾಘವೇಂದ್ರ ರಾವ್, ಟಿ.ಎಸ್. ರಾಮಯ್ಯ ಸೇರಿದಂತೆ ಇತರರು ಇದ್ದರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.7.2022ರಂದು ನಿಧನರಾದ ಕೊಕ್ಕನೂರು ಗ್ರಾಮದ ಹಿರಿಯರೂ, ನಮ್ಮ ಶ್ರೀ ಕಾಳಿದಾಸ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್‌ನ ಕಾರ್ಯಾಧ್ಯಕ್ಷರು ದಾವಣಗೆರೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರೂ ಮತ್ತು ಜಿಲ್ಲಾ ಕುರುಬ ಸಮಾಜದ ಹಾಲಿ ಅಧ್ಯಕ್ಷರಾದ

**ಶ್ರೀ ಜೆ. ದ್ಯಾಮಪ್ಪ**

ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ

**ಆಡಳಿತ ಮಂಡಳಿ ಮತ್ತು ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ**
**ಶ್ರೀ ಕಾಳಿದಾಸ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ (ರಿ.) ಹರಿಹರ**


## ನಗರದಲ್ಲಿಂದು ಕಾರ್ಗಿಲ್ ವಿಜಯೋತ್ಸವ

ಪ್ರೇರಣಾ ಯುವ ಸಂಸ್ಥೆ ವತಿಯಿಂದ ಇಂದು ಬೆಳಿಗ್ಗೆ 10 ಕ್ಕೆ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಗುವುದು. ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಿಂದ ರಾಜ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಯಲಿದೆ.


## 11ನೇ ವರ್ಷದ ಪುಣ್ಯಸ್ಮರಣೆ



ಜನನ : 02-07-1970

ಮರಣ : 25-07-2011

**ದಿ|| ಶ್ರೀಮತಿ ಸುಧಾ ಹೆಚ್.**
ಸ್ಟಾಫ್ ನರ್ಸ್, ಕಾಲೇಜ್ ಆಫ್ ಡೆಂಟಲ್ ಸೈನ್ಸಸ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ...

ಪತಿ : ಓಂಕಾರಪ್ಪ, ಮಾಲೀಕರು, ಕಲ್ಪಿತ ಗ್ಲಾಸ್, ಹದಡಿ ರಸ್ತೆ, ದಾವಣಗೆರೆ
ಪುತ್ರ : ಕಾರ್ತಿಕ್ ಪುತ್ರಿ: ಕಲ್ಪಿತ, ದಾವಣಗೆರೆ.
94487 54214


## ಸಹೋದರರ ನಡುವೆ ಜಗಳ: ಓರ್ವನ ಕೊಲೆ



ದಾವಣಗೆರೆ, ಜು.24- ಕ್ಷುಲ್ಲಕ ಕಾರಣಕ್ಕೆ ಜಗಳವಾಡಿಕೊಂಡ ಸಹೋದರರಿಬ್ಬರ ಪೈಕಿ ಓರ್ವನು ಕೊಲೆಯಾಗಿರುವ ಘಟನೆ ಸ್ಥಳೀಯ ಕೆ.ಟಿ.ಜೆ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಡಾಂಗೆ ಪಾರ್ಕ್ ಬಳಿ ಇಂದು ಸಂಜೆ ಘಟನೆ ನಡೆದಿದೆ. ಶೌಕತ್ ಆಲಿ (23) ಕೊಲೆಯಾದ ಸಹೋದರ. ಹಲವು ವರ್ಷಗಳಿಂದ ಡಾಂಗೆ ಪಾರ್ಕ್ ಕಾಂಪೌಂಡ್ ಬಳಿ ತಾಯಿ ಜೊತೆ ಇಬ್ಬರು ಸಹೋದರರು ತಾಡಪಾಲುಗಳಿಂದ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದರು. ಶೌಕತ್ ಆಲಿ ಎಂಬಾತನು ಜಮೀರ್ ಭಾಷಾ ತಾಯಿಯ ಸಹೋದರಿಯ ಮಗನೆನ್ನಲಾಗಿದೆ.

ಜಮೀರ್ ಭಾಷಾ ತನ್ನ ಸಹೋದರ ಶೌಕತ್ ಆಲಿಯನ್ನು ವಾಸವಿದ್ದ ಸ್ಥಳದಲ್ಲೇ ಕೊಲೆ ಮಾಡಿದ್ದಾನೆ. ಸಹೋದರರಿಬ್ಬರೂ ಪಂಚರ್ ಹಾಕಲು ಬಳಸುವ ಸಲ್ಯೂಷನ್ ಸೇವನೆಯ ಚಟದ ದಾಸರಾಗಿದ್ದರು. ಸ್ಥಳೀಯರ ಜೊತೆ ಹಲವು ಬಾರಿ ಜಗಳವಾಡುತ್ತಿದ್ದರು. ಇವರನ್ನು ಬೇರೆ ಕಡೆ ಸ್ಥಳಾಂತರಿಸಿದ್ದರೂ ಪುನಃ ಇಲ್ಲೇ ಬಂದು ವಾಸ ಮಾಡುತ್ತಿದ್ದರು. ಕೊಲೆ ಪ್ರಕರಣದ ಘಟನಾ ಸ್ಥಳಕ್ಕೆ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಆರ್.ಬಿ. ಬಸರಗಿ, ನಗರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ, ಸಿಪಿಐ ಗಜೇಂದ್ರಪ್ಪ, ಕೆಟಿಜೆ ನಗರ ಪಿಎಸ್‌ಐ ಪ್ರಭು ಕೆಳಗಿನಮನೆ ಇದ್ದರು. ಸಹೋದರನನ್ನು ಕೊಲೆ ಮಾಡಿದ್ದ ಜಮೀರ್ ಭಾಷಾನನ್ನು ಪೊಲೀಸರು ಬಂಧಿಸಿದ್ದಾರೆ.

## ಐಸಿಎಸ್‌ಇನಲ್ಲಿ ಶ್ರೀ ತರಳಬಾಳು ಸ್ಕೂಲ್‌ಗೆ ಅತ್ಯುತ್ತಮ ಫಲಿತಾಂಶ

ದಾವಣಗೆರೆ, ಜು.24- ನಗರದ ಶ್ರೀ ತರಳಬಾಳು ಸ್ಕೂಲ್, ಜಿಲ್ಲೆಯಲ್ಲಿಯೇ ದಿ ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್ (ಐಸಿಎಸ್‌ಇ) ಇವರಿಂದ ನಡೆದ ಪ್ರಪ್ರಥಮ ಮತ್ತು ಈವರೆಗಿನ ಏಕೈಕ ಶಾಲೆಯಾಗಿದ್ದು, 2022ರಲ್ಲಿ ರಾಷ್ಟ್ರಮಟ್ಟದ ಹತ್ತನೇ ತರಗತಿಯ ಐಸಿಎಸ್‌ಇ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಶ್ರೀ ತರಳಬಾಳು ಸ್ಕೂಲ್‌ನ ಒಂಬತ್ತನೇ ಬ್ಯಾಚಿನ ವಿದ್ಯಾರ್ಥಿಗಳಿಗೆ ಈ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಅತ್ಯುತ್ತಮವಾದಂತಹ ಶೇ. 100 ರಷ್ಟು ಫಲಿತಾಂಶ ಲಭಿಸಿದೆ. ಚಿ. ಲೋಚನ್ ಬಿ.ಹೆಚ್. ಶೇ. 97.83 ಅಂಕಗಳನ್ನು ಪಡೆದಿದ್ದಾರೆ. ಪರೀಕ್ಷೆಗೆ ಹಾಜರಾದ 23 ವಿದ್ಯಾರ್ಥಿಗಳಲ್ಲಿ 19 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 4 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈ ಫಲಿತಾಂಶ ದೊರಕಿಸಿಕೊಟ್ಟ ವಿದ್ಯಾರ್ಥಿಗಳನ್ನು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಮತ್ತು ಶ್ರೀ ಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಪ್ರಾಂಶುಪಾಲರಾದ ಶ್ರೀಮತಿ ಮಂಜುಳಾ ಕೆ.ಬಿ, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಅಪಘಾತ ಲೆಕ್ಕಪರಿಶೋಧಕ ಸಾವು

ದಾವಣಗೆರೆ, ಜು.24- ತೋಳಹುಣಸೆ ಬಳಿ ಇಂದು ರಾತ್ರಿ ನಡೆದ ರಸ್ತೆ ಅಪಘಾತದಲ್ಲಿ ಬೈಕ್ ಸವಾರರೋರ್ವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ದಾವಣಗೆರೆ ವಾಸಿ ವೇದಮೂರ್ತಿ (58) ಮೃತ ಬೈಕ್ ಸವಾರ. ಇವರು ಲೆಕ್ಕಪರಿಶೋಧಕರೆಂದು ಹೇಳಲಾಗಿದೆ. ವೇದಮೂರ್ತಿ ಅವರು ಕುರ್ಕಿಯಿಂದ ದಾವಣಗೆರೆಗೆ ಬೈಕ್ ನಲ್ಲಿ ಬರುವಾಗ ನಿಂತಿದ್ದ ಟ್ರ್ಯಾಕ್ಟರ್‌ಗೆ ಡಿಕ್ಕಿಯಾದ ಪರಿಣಾಮ ಈ ದುರಂತ ನಡೆದಿದೆ.

# ಮನುಕುಲದ ಶಾಂತಿಗೆ ಇಷ್ಟಲಿಂಗ ಪೂಜೆ ಮಾರ್ಗ



ದಾವಣಗೆರೆ, ಜು. 24- ಗುರು ಪೂರ್ಣಿಮೆ ಕೇವಲ ಒಂದೇ ದಿನಕ್ಕೆ ಸೀಮಿತವಾಗದೆ, ದಿನ ನಿತ್ಯವೂ ಗುರು-ಹಿರಿಯರನ್ನು ನೆನೆಯುತ್ತಾ ಇಷ್ಟಲಿಂಗ ಪೂಜೆ ಮಾಡುವುದರೊಂದಿಗೆ ಮನುಕುಲದ ಶಾಂತಿಗೆ ನಮ್ಮ ಮನಸ್ಸಿನ ಪೂಜೆ, ಪುನಸ್ಕಾರ, ಇಷ್ಟಲಿಂಗ ಪೂಜೆ ಒಂದೇ ಮಾರ್ಗವಾಗಿದೆ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನುಡಿದರು.

ನಗರದ ಅಭಿನವ ರೇಣುಕ ಮಂದಿರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾವಣಗೆರೆ ನಗರ ಮಹಿಳಾ ಘಟಕದ ವತಿಯಿಂದ ಏರ್ಪಡಿಸಿದ್ದ ಗುರುಪೂರ್ಣಿಮೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಕತ್ತಲೆಯನ್ನು ತೆಗೆದು ಹಾಕಿ, ಬೆಳಕನ್ನು ನೀಡುವವನೇ ಗುರು. ಈ ಹಿಂದೆ ಕೂಡ ಸನಾತನ ಸಂಸ್ಕೃತಿಯಲ್ಲಿ ಗುರುವನ್ನು ದೇವರ ಸಮಾನವೆಂದು ಪರಿಗಣಿಸಲಾಗುತ್ತಿತ್ತು. ಆತ್ಮ ಮತ್ತು ಪರಮಾತ್ಮನನ್ನು ಬೆಸೆಯುವಲ್ಲಿ ಗುರುವಿನ ಮಹತ್ವದ ಅರಿವನ್ನು ತಿಳಿಸಿದರು. ವೇದ, ಉಪನಿಷತ್ತು ಮತ್ತು ಪುರಾಣಗಳನ್ನು ಪ್ರದರ್ಶಿಸಿದ ವೇದವ್ಯಾಸರನ್ನು ಮನುಕುಲದ ಗುರು ಎಂದು ಪರಿಗಣಿಸಲಾಗಿದೆ ಎಂದು ಶ್ರೀಗಳು ತಿಳಿಸಿದರು.

ನಗರ ಮಹಿಳಾ ಘಟಕದ ಅಧ್ಯಕ್ಷರಾದ ಪುಷ್ಪ ವಾಲಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್, ರಾಷ್ಟ್ರೀಯ ಯುವ ಘಟಕದ ಉಪಾಧ್ಯಕ್ಷ ಸಂದೀಪ್ ಅಣಬೇರು, ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಜಿಲ್ಲಾ ಕಾರ್ಯದರ್ಶಿ ಬಿ.ಜೆ. ರಮೇಶ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷರಾದ ಶುಭ ಐನಳ್ಳಿ, ಜಿಲ್ಲಾ ಘಟಕದ ಪದಾಧಿಕಾರಿಗಳಾದ ಕೊರಟಿಕೆರೆ ಶಿವಕುಮಾರ್, ಮಂಜಣ್ಣ, ಮಂಗಳ, ರೂಪ, ಸುನಂದ, ಮಂಜುಳ, ಲತಾ, ರುಕ್ಕುಬಾಯಿ, ನಾಗವೇಣಿ, ಪುಷ್ಪಾ ರವಿ, ಯುವ ಘಟಕದ ಜಿಲ್ಲಾಧ್ಯಕ್ಷ ಶಂಭು ಉರೇಕೊಂಡಿ ಮತ್ತಿತರರು ಉಪಸ್ಥಿತರಿದ್ದರು.

# ಜೀವಮಾನ ಸಾಧನೆ ಪ್ರಶಸ್ತಿ: ಅರ್ಜಿ

ದಾವಣಗೆರೆ ಜು.24 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾ ಖೆಯು ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ರಾಜ್ಯದ ಕ್ರೀಡಾಪಟುಗಳಿಗೆ ಜೀವಮಾನ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ನೀಡಲಾಗುತ್ತದೆ.

2021 ನೇ ಸಾಲಿನ ಹಿರಿಯ ಕ್ರೀಡಾಪಟು, ತರಬೇತುದಾರರಾಗಿ ಸಾಧನೆ ಮಾಡಿರುವ ಕರ್ನಾಟಕದ ಹಿರಿಯ ಕ್ರೀಡಾಪಟುಗಳು, ತರಬೇತು ದಾರರು ಗಳಿಂದ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿಗಾಗಿ ಸೇವಾಸಿಂಧು ಆನ್‌ಲೈನ್ https://sevasindhu.karnataka.gov.in ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 10 ಕೊನೆ ದಿನ.

# ಜೆಂಬಿಗಿ ಮೃತ್ಯುಂಜಯಗೆ ಸನ್ಮಾನ



ದಾವಣಗೆರೆ, ಜು.24- ಹರಳೆಣ್ಣೆ ಕೊಟ್ರೂರು ಬಸವಪ್ಪ ಟ್ರಸ್ಟ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಕಳೆದ ವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಕನ್ನಡ ಉಪನ್ಯಾಸಕ ಹಾಗೂ ಸಾಹಿತಿ ಜೆಂಬಿಗಿ ಮೃತ್ಯುಂಜಯ ಅವರನ್ನು ಸನ್ಮಾನಿಸಲಾಯಿತು.

# ಎನ್‌ಎಸ್‌ಯುಐಗೆ ಗಿರಿಧರ್ ನೇಮಕ



ದಾವಣಗೆರೆ,ಜು.24- ದಾವಣಗೆರೆ ವಿವಿ ಘಟಕದ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್.ಎಸ್.ಯು.ಐ) ಅಧ್ಯಕ್ಷರಾಗಿ ಗಿರಿಧರ್ ಸತಾಳ್ ನೇಮಕಗೊಂಡಿದ್ದಾರೆ.

# ರೈತ ಚಳವಳಿಗಳು ಮಾರುಕಟ್ಟೆ, ಮತ ಪೆಟ್ಟಿಗೆಯನ್ನು ಕೈ ವಶ ಮಾಡಿಕೊಳ್ಳಲಿ

## ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ರೈತ ಚಳವಳಿ' ಕುರಿತು ಮಾತನಾಡಿದ ಪ್ರಕಾಶ್ ಕಮ್ಮರಡಿ



'ದಲಿತ ಚಳವಳಿ' ವಿಷಯದ ಕುರಿತು ಸಣ್ಣರಾಮ ಅವರು ಮಾತನಾಡಿದರು.

ದಾವಣಗೆರೆ, ಜು. 24- ರೈತ ಚಳವಳಿಗಳು ತಮ್ಮ ಹೋರಾಟದಲ್ಲಿ ಗೆಲುವು ಸಾಧಿಸಬೇಕಾದರೆ ಮಾರುಕಟ್ಟೆ ಹಾಗೂ ಮತ ಪೆಟ್ಟಿಗೆಯನ್ನು ಕೈ ವಶ ಮಾಡಿಕೊಳ್ಳುವ ಅಗತ್ಯವಿದೆ ಎಂದು ಪ್ರಕಾಶ್ ಕಮ್ಮರಡಿ ಹೇಳಿದರು.

ಬಂಡಾಯ ಸಾಹಿತ್ಯ ಸಂಘಟನೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದ ಎರಡನೇ ದಿನ ಭಾನುವಾರ 'ಕರ್ನಾಟಕದ ಜನ ಚಳವಳಿಗಳು: ಹಿನ್ನೋಟ-ಮುನ್ನೋಟ' ಗೋಷ್ಠಿಯಲ್ಲಿ 'ರೈತ ಚಳವಳಿ' ಕುರಿತು ಅವರು ಮಾತನಾಡಿದರು.

ರೈತ ವಿರೋಧಿ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ನಡೆದ ರೈತ ಚಳವಳಿ ಗೆಲುವು ಕಂಡಿತು. ಆದರೆ ಚಳವಳಿಯಲ್ಲಿ ಅತಿ ಹೆಚ್ಚು ರೈತರು ಭಾಗವಹಿಸಿದ್ದ ಪಂಜಾಬ್ ಚುನಾವಣೆಯಲ್ಲಿ ಮತ್ತೆ ಬಿಜೆಪಿ ಗೆಲುವು ಸಾಧಿಸಿತು. ಅಲ್ಲಿ ಚಳವಳಿಯಲ್ಲಿ ಗೆದ್ದ ರೈತರು, ರಾಜಕೀಯದಲ್ಲಿ ಸೋತರು. ರಾಜ್ಯದಲ್ಲೂ ಸಹ ಎರಡು ಕಾಯ್ದೆಗಳು ಮಾರಕವಾಗಿವೆ. ಕರ್ನಾಟಕದಲ್ಲಿ ರೈತ ಚಳವಳಿ ಹೋರಾಟದಲ್ಲೂ ಗೆದ್ದಿಲ್ಲ ಎಂದು ಹೇಳಿದರು.

ದೇಶದಲ್ಲಿ ಬಹುಪಾಲು ರೈತಾಪಿ ವರ್ಗವೇ ಇದ್ದರೂ, ಚಳವಳಿಗಳು ಹಿನ್ನಡೆ ಅನುಭವಿಸಲು ಜಾತಿ ಹಾಗೂ ಧರ್ಮದ ಲೆಕ್ಕಾಚಾರಗಳೇ. ಚುನಾವಣೆಗಳಲ್ಲಿ ಹಸಿರು ಶಾಲು ಹಾಕಿಕೊಂಡು ಮತದಾನಕ್ಕೆ ಬರುವ ರೈತರು, ಮತದಾನದ ವೇಳೆ ಹಸಿರು ಶಾಲು ಪಕ್ಕಕ್ಕಿಟ್ಟು ತಮ್ಮ ಜಾತಿ ಧರ್ಮದವರನ್ನು ಬೆಂಬಲುವ ಪರಿಪಾಠ ಇದೆ ಎಂದರು. ಬೀದಿ ಬದಿ ಚಹ ಮಾರುವವನೂ ಸೇರಿದಂತೆ ಪ್ರತಿ ಉತ್ಪಾದಕರೂ ತಮ್ಮ ಉತ್ಪಾದನಾ ವಸ್ತುಗಳಿಗೆ ಬೆಲೆ ನಿಗದಿಪಡಿಸುತ್ತಾರೆ. ಆದರೆ ರೈತರು ಮಾತ್ರ ತಾವು ಬೆಳೆದ ಬೆಳೆಗೆ ಬೆಂಬಲ ಬೆಲೆ ನೀಡುವಂತೆ ಸರ್ಕಾರವನ್ನು ಒತ್ತಾಯಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರಂತ ಎಂದರು.

ಕೃಷಿಯನ್ನೇ ನಂಬಿದ ಏಕೈಕ ಕಾರಣಕ್ಕಾಗಿ ದೇಶದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. 1995ರಿಂದ ಇಲ್ಲಿಯವರೆಗೆ ದೇಶದಲ್ಲಿ 3 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿ ದಿನ 45 ರೈತರು, ಪ್ರತಿ ಗಂಟೆಗೆ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ವಿವರಿಸಿದರು.

ದೇಶದಲ್ಲಿ ಒಂದು ಕಡೆ ಹಸಿವು ಮತ್ತೊಂದೆಡೆ ಮಹಿಳೆಯರು, ಮಕ್ಕಳಲ್ಲಿ ಅಪೌಷ್ಠಿಕತೆ ಹೆಚ್ಚಾಗಿದೆ. ಇತ್ತ ರೈತರು ಬೆಳೆದ ಲಕ್ಷ ಟನ್ ಗಟ್ಟಲೆ ಆಹಾರ, ಹಾಲು ವ್ಯರ್ಥವಾಗುತ್ತಿದೆ. ಈ ಅಸಮತೋಲನ ನಿವಾರಣೆ ಬಗ್ಗೆಯೂ ರೈತ ಚಳವಳಿಗಳು ಗಮನ ಹರಿಸಬೇಕಿದೆ ಎಂದರು.

ಸಣ್ಣರಾಮ ಅವರು 'ದಲಿತ ಚಳವಳಿ' ಕುರಿತು ಮಾತನಾಡುತ್ತಾ, ಸ್ವಾತಂತ್ರ್ಯಾ ನಂತರ ದೇಶದಲ್ಲಿ ಸಮಾನತೆ ಕನಸಿನ ಮಾತಾಗಿತ್ತು. ಆದರೆ ಆಂಗ್ಲರ ಜ್ಞಾನದಿಂದ ಕೆಲ ಯುವಕರು ಸಮಾನತೆಗಾಗಿ ಹೋರಾಟಕ್ಕೆ ಧುಮುಕಿದರು.

ಪ್ರಗತಿ, ಸಮಾನತೆ ನಡುವಿನ ಸಂಘರ್ಷದ ಫಲವಾಗಿ ಸಮಾಜವಾದಿ ಚಳವಳಿ, ಜಾತಿ ವಿನಾಶ ವೇದಿಕೆ ಆರಂಭವಾದವು. ಇವೆರಡರಲ್ಲೂ ಸಕ್ರಿಯರಾಗಿದ್ದ ಪ್ರೊ.ಬಿ. ಕೃಷ್ಣಪ್ಪ ಅವರು, ದಲಿತರಿಗಾಗಿ 1974ರಲ್ಲಿ ಭದ್ರಾವತಿಯ ಹರಿಜನ ಕಾಲೋನಿಯಲ್ಲಿ ಸಭೆ ನಡೆಸಿ, ದಲಿತ ಸಂಘರ್ಷ ಸಮಿತಿ ಸ್ಥಾಪಿಸಿದ್ದಾಗಿ ಹೇಳಿದರು.

ಭದ್ರಾವತಿಗೆ ಸೀಮಿತವಾಗಿದ್ದ ದಲಿತ ಸಂಘರ್ಷ ಸಮಿತಿ ನಂತರ ರಾಜ್ಯ ವ್ಯಾಪ್ತಿ ಪಡೆದಾಗ ಅದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಎಂದು ಹೆಸರು ಪಡೆಯಿತು. ಕ್ರಮೇಣ ಸಮಿತಿಯಲ್ಲಿ ಶೋಷಿತ ವರ್ಗದ ಎಲ್ಲಾ ಜಾತಿಗಳು ಸೇರ್ಪಡೆಯಾಗಿ ಅದು ಚಳವಳಿಯಾಗಿ ರೂಪಾಂತರಗೊಂಡು, ಮಹಿಳಾ ಪರ ಹೋರಾಟ, ಭೂ ಹೋರಾಟ ಸೇರಿದಂತೆ ಸಾವಿರಾರು ಹೋರಾಟಗಳು ನಡೆದವು ಎಂದರು.

ಪ್ರೊ.ಕೃಷ್ಣಪ್ಪ ಅವರು, 1983ರಲ್ಲಿ ಜನತಾ ಪಕ್ಷಕ್ಕೆ ಬೆಂಬಲ ನೀಡಿದ್ದರು. ಆದರೆ ಪಕ್ಷ ಡಿಎಸ್‌ಎಸ್ ಸಮಸ್ಯೆಗಳಿಗೆ ಸ್ಪಂದಿಸಲಿಲ್ಲ. 1992ರಲ್ಲಿ ತಾವೇ ಸಂಸದರ ಚುನಾವಣೆಗೆ ಸ್ಪರ್ಧಿಸಿದ್ದರು. ಆದರೆ ಟಿಕೆಟ್ ನೀಡಿದ ಪಕ್ಷವೇ ಅವರನ್ನು ಸೋಲಿಸಿತು. ನಂತರ ಅವರು ಉತ್ತರ ಪ್ರದೇಶದಲ್ಲಿ ಅಂಬೇಡ್ಕರ್ ಸಿದ್ಧಾಂತವನ್ನೇ ತನ್ನದಾಸಿಕೊಂಡಿದ್ದ ಬಿ.ಎಸ್.ಪಿ. ಸ್ವೀಕಾರ ಮಾಡಿದರು. ಆದರೆ ನಂತರ ಪ್ರಭುತ್ವದ ಕುತಂತ್ರದಿಂದ ಹಾಗೂ ಕೃಷ್ಣಪ್ಪ ಅವರನ್ನು ಅರ್ಥ ಮಾಡಿಕೊಳ್ಳದವರಿಂದಾಗಿ ಡಿಎಸ್‌ಎಸ್ ಇಬ್ಭಾಗವಾಯಿತು.

ಇದೀಗ ದಾವಣಗೆರೆಯಲ್ಲಿ ಕಳೆದ ಮಾರ್ಚ್‌ನಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ 25 ಜಿಲ್ಲೆಗಳ ಸಂಘಟನೆಗಳು ಒಂದಾಗಿದ್ದು, ಹೋರಾಟ ನಡೆಸಲು ತೀರ್ಮಾನಿಸಿವೆ ಎಂದು ಹೇಳಿದರು.

ಸಂಘಟನೆ ಸನಾತನದೆಡೆ ಹೋಗುತ್ತಿರುವ ಯುವ ಜನತೆಯನ್ನು ತಲುಪಬೇಕಿದೆ. ಮೌಢ್ಯ-ಕಂದಾಚಾರದ ಕೇಂದ್ರ ಬಿಂದುಗಳಾದ ಮಹಿಳಾ ಒಕ್ಕೂಟಗಳನ್ನು ಬಲಪಡಿಸಬೇಕಿದೆ ಎಂದು ಹೇಳಿದರು.

ಎನ್.ಗಾಯತ್ರಿ ಮಹಿಳಾ ಚಳವಳಿ ಕುರಿತು, ಕೆ.ಮಹಾಂತೇಶ್ ಕಾರ್ಮಿಕ ಚಳವಳಿ ಕುರಿತು ಮಾತನಾಡಿದರು. ಸಿದ್ದನಗೌಡ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಎಂ. ಮಂಜಣ್ಣ ಕಾರ್ಯಕ್ರಮ ನಿರೂಪಿಸಿದರು. ನವಿಲೇಹಾಳ್ ಸ್ವಾಗತಿಸಿದರು. ಹೆಗ್ಗೆರೆ ರಂಗಪ್ಪ ವಂದಿಸಿದರು.

# ಬಸವನಾಳು ಗ್ರಾಮದಲ್ಲಿ ರೈತರ ಶಿಬಿರ



ದಾವಣಗೆರೆ, ಜು.24- ಭಾರತೀಯ ಸ್ಟೇಟ್ ಬ್ಯಾಂಕ್ ಎಡಿಬಿ ಶಾಖೆ (ದಾವಣಗೆರೆ) ಹಾಗೂ ಪ್ರಾದೇಶಿಕ ವ್ಯವಹಾರ ಕಚೇರಿ ಸಂಯುಕ್ತಾಶ್ರಯದಲ್ಲಿ ತಾಲ್ಲೂಕಿನ ಬಸವನಾಳು ಗ್ರಾಮದಲ್ಲಿ ರೈತರ ಏಳಿಗೆಗಾಗಿ 'ಅಂದು - ಇಂದು - ಎಂದೆಂದು' ಶೀರ್ಷಿಕೆಯಡಿ ರೈತರ ರಾತ್ರಿ ಶಿಬಿರ ನಡೆಯಿತು.

ಬಸವನಾಳು ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಕುಬೇರಪ್ಪ ಅಧ್ಯಕ್ಷತೆಯಲ್ಲಿ ನಡೆದ ರೈತರ ರಾತ್ರಿ ಶಿಬಿರದಲ್ಲಿ ಬಸವೇಶ್ವರ ಭಜನಾ ಮಂಡಳಿ ಕಲಾವಿದರು ಭಜನೆ ಮಾಡುವ ಮೂಲಕ ರಂಜಿಸಿದರೆ, ಚಿತ್ರದುರ್ಗದ ತೀಕ್ಷ್ಣ ಅಂಧ ಮಕ್ಕಳ ಶಾಲೆಯ ಮಕ್ಕಳು ರಸಮಂಜರಿಯ ಮೂಲಕ ವಿವಿಧ ಗೀತೆಗಳನ್ನು ಪ್ರಸ್ತುತ ಪಡಿಸಿದರು.

ಇದೇ ವೇಳೆ ಶತಾಯುಷಿ ಬಸಮ್ಮ ರೇವಪ್ಪರ್ ಅವರನ್ನು ಸನ್ಮಾನಿಸಲಾಯಿತು. ಬಸವನಾಳು ಗ್ರಾಮದ ರೈತರು ಸಕಾಲದಲ್ಲಿ ಸಾಲ ಮರು ಪಾವತಿ ಮಾಡಿರುವ ಕಾರಣ ಎನ್‌ಪಿಎ ಮುಕ್ತ ಗ್ರಾಮ ಎಂದು ಘೋಷಿಸಲಾಯಿತು.

ಈ ವೇಳೆ ಪ್ರಾದೇಶಿಕ ವ್ಯವಸ್ಥಾಪಕ ಅನಿಲ್ ಬಹಾರಿ, ಗ್ರಾ.ಪಂ ಮಾಜಿ ಅಧ್ಯಕ್ಷ ಬಿ.ಜಿ.ಮರುಳಸಿದ್ದಯ್ಯ, ರೈತ ಮುಖಂಡ ಬಿ.ಸಿ.ಮರಳುಸಿದ್ದಯ್ಯ, ಗ್ರಾ.ಪಂ ಉಪಾಧ್ಯಕ್ಷರಾದ ಎನ್.ನಾಗರತ್ನಮ್ಮ, ಸದಸ್ಯರಾದ ಎ.ಬಿ.ರೇವಣಸಿದ್ದಪ್ಪ, ಕೆ.ಹೆಚ್.ಸೋಮಶೇಖರ್, ಶಾಂತಿ ಬಾಯಿ, ಶೋಭಾ ಮತ್ತಿತರರಿದ್ದರು.

ಮಂಡಿಪೇಟೆ ಶಾಖೆ ಮುಖ್ಯ ವ್ಯವಸ್ಥಾಪಕ ಹೆಚ್.ಜಿ.ಸುರೇಶ್ ನಿರೂಪಿಸಿದರು. ವೆಂಕಟೇಶ್ ವೈದ್ಯ ಸ್ವಾಗತಿಸಿದರು. ಶ್ರೀಪಾದ್ ಆರ್.ಜೋಷಿ ವಂದಿಸಿದರು.

# ಮಡಿವಾಳ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ : ಅರ್ಜಿ ಆಹ್ವಾನ

ದಾವಣಗೆರೆ, ಜು. 24 - ಶ್ರೀ ಮಡಿವಾಳ ಮಾಚಿದೇವ ಸಂಘದಿಂದ 2021-22ನೇ ಸಾಲಿನಲ್ಲಿ ಉತ್ತೀರ್ಣರಾದ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಜುಲೈ 30. ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಅಧ್ಯಕ್ಷರು, ಕಾರ್ಯದರ್ಶಿಗಳು, ಜಿಲ್ಲಾ ಮಡಿವಾಳ ಮಾಚಿದೇವ ಸಂಘ, ಮಾಚಿದೇವ ಸಮುದಾಯ ಭವನ, 1ನೇ ಮುಖ್ಯರಸ್ತೆ, 17ನೇ ತಿರುವು, ವಿನೋಬನಗರ, ದಾವಣಗೆರೆ ಇಲ್ಲಿಗೆ ತಲುಪಿಸತಕ್ಕದ್ದು. 9448000077, 9844001462, 9880497271, 8970356463, 6362961426 ಇವುಗಳಿಗೆ ಸಂಪರ್ಕಿಸುವಂತೆ ಸಂಘದ ಅಧ್ಯಕ್ಷ ಎಂ. ನಾಗೇಂದ್ರಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಚಿತ್ರೋತ್ಸವ

ದಾವಣಗೆರೆ ವಿಶ್ವವಿದ್ಯಾಲಯ ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ಇಂದಿನಿಂದ 3 ದಿನ ಚಿತ್ರೋತ್ಸವ ನಡೆಯಲಿದೆ.


ಇಂದು ಬೆಳಿಗ್ಗೆ 11 ಗಂಟೆಗೆ ವಾರ್ಷಿಕೋತ್ಸವ ಸಮಾರಂಭ ಹಾಗೂ ವಾರ್ಷಿಕ ಕಲಾ ಪ್ರದರ್ಶನದ ಉದ್ಘಾಟನೆ ನಡೆಯಲಿದ್ದು, ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ನಾಡೋಜ ಡಾ. ವಿ.ಟಿ. ಕಾಳೆ, ದಾವಣಗೆರೆ ವಿವಿ ಕಲಾ ನಿಕಾಯದ ಡೀನ್ ಡಾ. ವೆಂಕಟರಾವ್ ಎಂ. ಪಲಾಟೆ, ವಿವಿ ದೃಶ್ಯಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿ ಡಾ. ಸತೀಶ್‌ಕುಮಾರ ಪಿ. ವಲ್ಲೇಪುರೆ, ಫ್ಯಾಷನ್ ವಿಭಾಗದ ಸಂಯೋಜನಾಧಿಕಾರಿ ಡಾ. ಜೈರಾಜ್ ಎಂ. ಚಿಕ್ಕಪಾಟೀಲ್ ಭಾಗವಹಿಸಲಿದ್ದಾರೆ.

ನಾಳೆ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಪ್ರಾತ್ಯಕ್ಷಿಕೆ ಮತ್ತು ಉಪನ್ಯಾಸ ನಡೆಯಲಿದೆ. ದಾವಣಗೆರೆ ವಿವಿ ಕುಲಸಚಿವರಾದ (ಮೌಲ್ಯಮಾಪನ) ಡಾ.ಕೆ. ಶಿವಶಂಕರ್ ಅಧ್ಯಕ್ಷತೆ ವಹಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ದಾವಣಗೆರೆ ವಿವಿ ಸಿಂಡಿಕೇಟ್ ಸದಸ್ಯ ಟಿ.ಎನ್. ವಿಚಾರ್, ಡಾ. ಜೈರಾಜ್ ಎಂ. ಚಿಕ್ಕಪಾಟೀಲ್, ಡಾ. ಸತೀಶ್‌ಕುಮಾರ್ ಪಿ. ವಲ್ಲೇಪುರ ಭಾಗವಹಿಸುವರು.

ನಾಡಿದ್ದು ದಿನಾಂಕ 27 ರ ಬುಧವಾರ ಬೆಳಿಗ್ಗೆ 11 ಗಂಟೆಗೆ ವಾರ್ಷಿಕ ಕಲಾಪ್ರದರ್ಶನ ಹಾಗೂ ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ ನಡೆಯಲಿದೆ.

ದಾವಣಗೆರೆ ವಿವಿ ಕುಲಸಚಿವರಾದ ಟಿ.ಬಿ. ಸರೋಜ ಅಧ್ಯಕ್ಷತೆ ವಹಿಸುವರು. ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ, ಕರ್ನಾಟಕ ವಿವಿ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟದ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು - ನಾಳೆ ಶ್ರೀ ನಾಮದೇವರ ಪುಣ್ಯಾರಾಧನೆ



ನಾಮದೇವ ಸಿಂಪಿ ಸಮಾಜದಿಂದ ಸಂತ ಶ್ರೇಷ್ಠ ಶಿರೋಮಣಿ ಶ್ರೀ ನಾಮದೇವ ಮಹಾರಾಜರ 672ನೇ ಸಂಜೀವಿನಿ ಪುಣ್ಯಾರಾಧನೆಯು ಇಂದು - ನಾಳೆ ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ವಿಠ್ಠಲ ಮಂದಿರದಲ್ಲಿ ನಡೆಯಲಿದೆ.

ಇಂದು ಸಂಜೆ 5 ಗಂಟೆಗೆ ಸಂತ ಮಂಡಳಿಯವರಿಂದ ಪೋಥಿ ಸ್ಥಾಪನೆ ಮತ್ತು ಭಜನಾ ಕಾರ್ಯಕ್ರಮ ಜರುಗಲಿದ್ದು, ಸಂಜೆ 7 ಗಂಟೆಗೆ ಹೊಸಪೇಟೆಯ ಜೆ.ಪಿ. ಪುಂಡಲೀಕರಾವ್ ಜ್ಞಾನಮೋಟೆ ಇವರು ಶ್ರೀ ಸಂತ ನಾಮದೇವ ಮಹಾರಾಜರ ಚರಿತ್ರೆಯ ಕೀರ್ತನೆ ನಡೆಸಿಕೊಡಲಿದ್ದಾರೆ.

ನಾಳೆ ಮಂಗಳವಾರ ಮುಂಜಾನೆ 5 ರಿಂದ ಭಜನೆ, ಕಾಕಡಾರತಿ. ಬೆಳಿಗ್ಗೆ 9 ಕ್ಕೆ ಪ್ರವಚನ, ಬೆಳಿಗ್ಗೆ 10 ರಿಂದ ಶ್ರೀ ನಾಮದೇವ ಮಹಾರಾಜರ ಪಲ್ಲಕ್ಕಿ ಉತ್ಸವ, ಗುಲಾಲ್ ಕಾರ್ಯಕ್ರಮ. ಮಧ್ಯಾಹ್ನ 12 ಕ್ಕೆ ಕೀರ್ತನೆ ಜರುಗಲಿದೆ.

# ಮಲೇಬೆನ್ನೂರಿನಲ್ಲಿ ವನಮಹೋತ್ಸವ



ಮಲೇಬೆನ್ನೂರು, ಜು.24- ಪಟ್ಟಣದ ಗಂಗಮ್ಮ ಬಡಾವಣೆಯಲ್ಲಿ ಲಯನ್ಸ್ ಕ್ಲಬ್ (ಮಲೇಬೆನ್ನೂರು) ಮತ್ತು ಶ್ರೀ ರಂಗನಾಥ ಪ್ರೌಢಶಾಲೆಯ ಸಹಯೋಗದೊಂದಿಗೆ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಾತನಾಡಿದ ಲಯನ್ಸ್ ಮಾಜಿ ಗೌರ್ವನರ್ ಡಾ. ಟಿ.ಬಸವರಾಜ್, ವಿದ್ಯಾರ್ಥಿಗಳಿಗೆ ಪರಿಸರದ ಮಹತ್ವ ತಿಳಿಸಿಕೊಟ್ಟರು. ಲಯನ್ಸ್ ಕ್ಲಬ್ ಅಧ್ಯಕ್ಷ ಎನ್.ಜಿ.ಶಿವಾಜಿ ಪಾಟೀಲ್, ಕಾರ್ಯದರ್ಶಿ ಚಿಟ್ಟಕ್ಕಿ ನಾಗರಾಜ್, ಖಜಾಂಚಿ ಉಡೇದರ ಸಿದ್ದೇಶ್, ಪುರಸಭೆ ಸದಸ್ಯ ಗೌಡ್ರು ಮಂಜುನಾಥ್, ಅರಣ್ಯಾಧಿಕಾರಿ ಸದಾನಂದ್, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಓ.ಜಿ.ರುದ್ರಗೌಡ್ರು, ಡಾ. ಹೆಚ್.ಜೆ.ಚಂದ್ರಕಾಂತ್, ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಸಿರಿಗೆರೆ ಸಿದ್ದಪ್ಪ, ಬಿ.ಮಂಜುನಾಥ್, ಹುಳ್ಳಳ್ಳಿ ಸಿದ್ದೇಶ್, ಚಿಟ್ಟಕ್ಕಿ ವಿದ್ಯಾಸಂಸ್ಥೆ ಪ್ರಾಚಾರ್ಯ ಕುಮಾರ್ ಹಾಗೂ ಮತ್ತಿತರರು ಭಾಗವಹಿಸಿದ್ದರು.

# ಗೋವಿನಹಾಳ್ : ಕಿರುಚಿತ್ರ ಪ್ರದರ್ಶನ



ಮಲೇಬೆನ್ನೂರು, ಜು.24- ಗೋವಿನಹಾಳ್ ಗ್ರಾಮದಲ್ಲಿ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಮಹಿಳೆಯರ ಪ್ರಗತಿ ಕುರಿತ ವಿಶೇಷ ಚಲನಚಿತ್ರ ವೀಕ್ಷಣೆ ಕಾರ್ಯಕ್ರಮವನ್ನು ಮಲೇಬೆನ್ನೂರು ಯೋಜನಾಧಿ ಕಾರಿ ವಸಂತ್ ದೇವಾಡಿಗ ಉದ್ಘಾಟಿಸಿದರು. ಚಲನಚಿತ್ರ ಪ್ರದರ್ಶಕ ಮಾರುತಿ, ವಲಯ ಮೇಲ್ವಿಚಾರಕ ಶ್ರೀಮತಿ ಶಾರದ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಜೈನ್ ಶಾಲೆಗೆ ಶೇ. 100 ರಷ್ಟು ಫಲಿತಾಂಶ

ದಾವಣಗೆರೆ, ಜು.24- ಸಿಬಿಎಸ್‌ಇ ಪರೀಕ್ಷೆಯಲ್ಲಿ ನಗರದ ಜೈನ್ ಪಬ್ಲಿಕ್ ಶಾಲೆಗೆ ಶೇ.100 ರಷ್ಟು ಫಲಿತಾಂಶ ಲಭಿಸಿದೆ. ಶಾಲೆಯ ಮೊಹಮ್ಮದ್ ಇರಬಾಜ್ ಶೇ.91.4 ಪ್ರಥಮ, ಸೈಯದ್ ಉಮರ್ ಖಲೀಲ್ ಶೇ.90 ದ್ವಿತೀಯ ಹಾಗೂ ಪುನೀತ್ ರಾಥೋಡ್ ಶೇ.88 ತೃತೀಯ ಸ್ಥಾನ ಪಡೆದಿದ್ದಾರೆ. ಉತ್ತಮ ಫಲಿತಾಂಶ ನೀಡಿರುವ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಮತ್ತು ಬೋಧಕ ವರ್ಗದವರಿಗೆ ಶಾಲೆಯ ಅಧ್ಯಕ್ಷ ಅಚಲ್ ಚಂದ್ ಜೈನ್, ಪ್ರಾಚಾರ್ಯ ಎಸ್.ನಟರಾಜ್, ಸಂಯೋಜಕ ಯಶೋಧರ ಕಸ್ಬೇಕರ್ ಅವರುಗಳು ಅಭಿನಂದಿಸಿದ್ದಾರೆ.


**ಸೈಟ್‌ಗಳು ಮಾರಾಟಕ್ಕಿವೆ**
J.H ಪಟೇಲ್ ಬಡಾವಣೆಯಲ್ಲಿ 40x60 North, 40x60 West, ಬನಶಂಕರಿ ಲೇಔಟ್‌ನಲ್ಲಿ 40x60 East, ಇಂಡೋರ್ ಸ್ಟೇಡಿಯಂ ಹತ್ತಿರ 40x60 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಸರಸ್ವತಿ ಬಡಾವಣೆಯ ಡಾಬಾ ಸ್ಟಾಪ್ ಹತ್ತಿರ 30x50 ಪಶ್ಚಿಮ, 40x36 ಪೂರ್ವ ಹೈಟೆಕ್ ಹಾಸ್ಪಿಟಲ್ ರಸ್ತೆ, ಶಿರಡಿ ಸಾಯಿಬಾಬಾ ದೇವಸ್ಥಾನದ ಹಿಂಭಾಗ 30x50 ಪೂರ್ವ ಅಕ್ಕ ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

ಶಿವ ಪಾರ್ವತಿ ಲೇಔಟ್‌ನಲ್ಲಿ EURO SCHOOL ಹತ್ತಿರ 40x84 East, 60x84 East, 35x75 North 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
to work as 10 Executive / Team Leaders without target, who are ready to travel to different districts, youth under age 30, preference for people who know Bangalore area very well. Qualification : Any degree and candidate must know English fluency.
M : 80882-10419

**ಮನೆ ಬಾಡಿಗೆಗೆ ಇದೆ**
ಪಿ.ಜೆ ಬಡಾವಣೆ ಚರ್ಚ್ ಹಿಂಭಾಗ (ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ) ಮುದ್ದಳ್ಳಿ ತೋಟದಲ್ಲಿ 1 BHK ಮನೆ ಬಾಡಿಗೆಗೆ ಇವೆ. ವಿಚಾರಿಸಿ :
94811 82670

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
63647 83999

**ಮಳಿಗೆ ಬಾಡಿಗೆಗೆ ಇದೆ**
B.I.E.T ರಸ್ತೆಯಲ್ಲಿ ಮಳಿಗೆ ಬಾಡಿಗೆಗೆ ಇದೆ "ನಯನ" (R.G ಕಾಲೇಜ್ ಬಿಲ್ಡಿಂಗ್)
94810 38402, 99162 36521

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೋರಿಯರ್ ಸೌಲಭ್ಯವಿದೆ.
91084 18233, 97432 17566

**SOLAR SERVICE CAMP**
ಯವುದೇ ಕಂಪನಿಯ ಸೋಲಾರ್ ಸರ್ವೀಸ್ ರಿಯಾಯಿತಿ ದರದಲ್ಲಿ ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
97413 97006
94487 83332

**Nursery Teacher Training NIT**
ವಿದ್ಯಾವಂತ ಮಹಿಳೆಯರಿಗೆಗೊಂದು ಶಿಕ್ಷಕರಾಗುವ ಸುವರ್ಣ ಅವಕಾಶ
ವಿದ್ಯಾರ್ಹತೆ: PUC & Any Degree
ISO ಪ್ರಮಾಣೀಕರಿಸಿದ ಪ್ರಮಾಣ ಪತ್ರ ಹಾಗೂ 100% ಉದ್ಯೋಗ ಅವಕಾಶ
95354 33199, 73536 39111

**ಬೇಕಾಗಿದ್ದಾರೆ**
ಸ್ಟೀಲ್ ಫರ್ನೀಚರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
99017 16310

**WANTED**
Experienced Tally Operator, Attractive Salary, Full Time Job, only For Male
70190 73080

**ಮನೆ ಬಾಡಿಗೆ ಇದೆ**
ಆಂಜನೇಯ ಬಡಾವಣೆ 17ನೇ ಕ್ರಾಸ್, ಡೋರ್ ನಂಬರ್ #1810/86 ಸಿದ್ದೇಶ್ವರ ಕಾಲೇಜ್ ರೋಡ್ ಸಿಂಗಲ್ ಬೆಡ್ಡ್ ರೂಂ
96324 38742

**ಮನೆ ಬಾಡಿಗೆಗೆ ಇದೆ**
ಜಯನಗರ ಸಾಯಿ ದೇವಸ್ಥಾನ ಹಿಂಭಾಗದಲ್ಲಿ ಕೆಳಗಿನ ಮನೆ (ನೆಲ ಮಹಡಿ) ಡಬಲ್ ಬೆಡ್ ರೂಂ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ವಿಚಾರಿಸಿ.
97311 60922, 80730 12526

**WANTED TEACHER**
(Only Ladies)
B.Ed, D.Ed (English / Social)
B.Sc, B.Ed (Science)
Devaraj Urs Layout Davanagere.
80732 26541, 90362 12686

**ಬಾಡಿಗೆಗೆ ಇದೆ**
ಡಿ.ಸಿ.ಎಮ್ ಬಡಾವಣೆಯ 'ಸಿ' ಬ್ಲಾಕ್‌ನಲ್ಲಿ ಸಿಂಗಲ್ ರೂಮ್ ಅಟ್ಯಾಚ್ ಎರಡನೆಯ ಮಹಡಿಯ ಮೇಲೆ ಖಾಲಿ ಇರುತ್ತದೆ. ಸಂಪರ್ಕಿಸಿ:
99024 12406

**ಥೆರಪಿ ಉಚಿತ**
15 ದಿನಗಳಲ್ಲಿ ನೇರ ಪರಿಹಾರ
ಬಿಪಿ, ಶುಗರ್, ವೆರಿಕೋಸ್ ವೇನ್, ಬೆನ್ನು/ಸೊಂಟ/ಮಂಡಿ ನೋವು, ಗ್ಯಾಸ್ಟ್ರಿಕ್, ಪಾದದಲ್ಲಿ ಉರಿ ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.
HOME DEMO ಸೌಲಭ್ಯ ವಿದೆ. T&C. ದಾವಣಗೆರೆ
9242121277
ಪಾಂಪ್ಲೆಂಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ

**ಬೇಕಾಗಿದ್ದಾರೆ**
ಫುಡ್ ಮಾರ್ಟ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: ಪಿಯುಸಿ/ Any Degree
98864 63531

**ಸೈಟ್ ಮಾರಾಟಕ್ಕಿದೆ**
ಸುಬ್ರಹ್ಮಣ್ಯ ನಗರ ಹೈಟೆಕ್ ಆಸ್ಪತ್ರೆ (SSIMS) ಹತ್ತಿರ 30x50 ಪಶ್ಚಿಮ ದಿಕ್ಕಿನ ಎರಡು ಸೈಟ್‌ಗಳು ಮಾರಾಟಕ್ಕಿವೆ.
98443 04848, 96636 66870

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಎಲ್.ಎನ್. ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್
ಪ್ರಖ್ಯಾತ ಐ.ಟಿ. ಕಂಪನಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು. ಹೌಸ್ ಕೀಪಿಂಗ್ ಕೆಲಸಕ್ಕೆ ಹಾಗೂ ಟೆಲಿಫೋನ್ ಆಪರೇಟರ್ ಹುಡುಗರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 30 ವರ್ಷಗಳು. ಸೌಲಭ್ಯಗಳು : ಸಂಬಳ, ಬೋನಸ್, ಲೀವ್ ಪೇಮೆಂಟ್, ಯೂನಿಫಾರ್ಮ್, ಶೂಸ್, ಪಿ.ಎಫ್., ಇಎಸ್‌ಐ., ಗ್ರಾಚ್ಯುಟಿ ಮತ್ತು ಇತರೆ ಸೌಲಭ್ಯವಿರುತ್ತದೆ.
99002 67373, 99002 77949, 99005 19554

**ಸೈಟು ಮಾರಾಟಕ್ಕಿದೆ**
ದಾವಣಗೆರೆ ನಗರದ ಮಹಾಲಕ್ಷ್ಮಿ ಬಡಾವಣೆಯಲ್ಲಿ ಸೈಟು ನಂ. 162, 30x40 ಸೈಜಿನ ಪಶ್ಚಿಮ ದಿಕ್ಕಿಗಿರುವ ಸೈಟು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
80507 45086

**ಹಳೇಪೇಟೆಯಲ್ಲಿ ಮನೆ ಮಾರಾಟಕ್ಕಿದೆ**
16.3/4x86=1440.5 #977/1 ಉತ್ತರಾಭಿಮುಖವಾಗಿರುವ ನೆಲಮಹಡಿ ಮತ್ತು ಮೊದಲನೆ ಮಹಡಿ ಮನೆಯು ದಾವಣಗೆರೆಯ ಮಹಾನಗರದಲ್ಲಿರುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
93434 75963, 97401 63814

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86603 81629
80505 55779

**ಸೈಟು ಮಾರಾಟಕ್ಕಿದೆ**
ಹರಿಹರ ನಗರದ ಕೆಹೆಚ್‌ಬಿ ಕಾಲೋನಿ ಮುಂಭಾಗ, ಉತ್ತರ ಮತ್ತು ಪೂರ್ವ (ಕಾರ್ನರ್) ಸೈಟ್ ನಂ. 150, 40x40 ವಿಸ್ತಾರದ (ಚದರ ಅಡಿ)
73492 06165

**GET YOUR CERTIFICATE**
On Basic Computer, Tally, Ms Office, AICTE Approved. ISO 9001:2015. By Online Test.
PH: 70220 76255

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**ಬಾಡಿಗೆಗೆ ಇದೆ**
ಡಿ.ಸಿ.ಎಮ್ ಬಡಾವಣೆಯ 'ಸಿ' ಬ್ಲಾಕ್‌ನಲ್ಲಿ ಸಿಂಗಲ್ ರೂಮ್ ಅಟ್ಯಾಚ್ ಎರಡನೆಯ ಮಹಡಿಯ ಮೇಲೆ ಖಾಲಿ ಇರುತ್ತದೆ. ಸಂಪರ್ಕಿಸಿ:
99024 12406

**ಮಾರಾಟಕ್ಕಿದೆ**
ದಾವಣಗೆರೆಯಿಂದ 20 ರಿಂದ 25 ಕಿ.ಮೀ ವ್ಯಾಪ್ತಿಯಲ್ಲಿ ಅಡಿಕೆ ತೋಟ, ನೀರಾವರಿ ಹಾಗೂ ಒಣ ಭೂಮಿ ಮತ್ತು ದಾವಣಗೆರೆ ನಗರದಲ್ಲಿ ಯಾವುದೇ ಅಳತೆಯ ನಿವೇಶನ ಮತ್ತು ಇತ್ತೀಚೆಗೆ ನಿರ್ಮಿಸಿದ ಹೊಸ ಮನೆ ಖರೀದಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ.
99727 00107

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ಅಕ್ಷಯ**
ಬೆಳ್ಳಿ ಮತ್ತು ಚಿನ್ನಾಭರಣಗಳ ಖರೀದಿ ಈ ದಿನ Online ಬೆಲೆಗೆ ಸಂಪರ್ಕಿಸಿ:
76193 28978

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಪೇಷೆಂಟ್ ನರ್ಸಿಂಗ್ -2 ವರ್ಷ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಕೆಲಸ ಮಾಡಬಹುದು.
ಅರ್ಹತೆ :SSLC, PUC ಪಾಸ್ /ಫೇಲ್
NTC : ನರ್ಸರಿ ಟೀಚರ್ಸ್ ಟ್ರೇನಿಂಗ್
ಗಂಗೋತ್ರಿ ಎಜುಕೇಶನಲ್ ಟ್ರಸ್ಟ್. (ರಿ) ಲಾಯರ್ ರೋಡ್ ದಾವಣಗೆರೆ.
8660235013

**ಸುಕ್ಷೇತ್ರ ಗಾಣಗಟ್ಟೆ ಶ್ರೀ ಮಾಯಮ್ಮ ದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೇಯಸ್ ಭಟ್- 81232 83279
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಹಣಕಾಸಿನ ಸಮಸ್ಯೆ, ಲೈಂಗಿಕ, ಸಂತಾನ, ವಶೀಕರಣ ಇನ್ನೂ ನಿಮ್ಮ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ವಿ. ಸೂ : ನಿಮ್ಮ ಕೆಲಸ ಆಗದಿದ್ದಲ್ಲಿ ಹಣ ವಾಪಸ್ ನೀಡಲಾಗುವುದು.
ವಿಳಾಸ : ಹಳೇ ಆರ್.ಟಿ.ಓ ಆಫೀಸ್ ಹತ್ತಿರ, ಅಯ್ಯಪ್ಪ ಸ್ವಾಮಿ ದೇವಸ್ಥಾನ ಹಿಂಭಾಗ, ಬಿ.ಐ.ಇ.ಟಿ. ಕಾಲೇಜ್ ರಸ್ತೆ, ದಾವಣಗೆರೆ.

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಬೇಕಾಗಿದ್ದಾರೆ**
ಸೇಲ್ಸ್ / ಮಾರ್ಕೆಟಿಂಗ್ - 04
ಟ್ಯಾಲಿ ಬಿಲ್ಲಿಂಗ್ - 02
ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ
ವಿಶ್ವಾಸ್ ಸೈಂಟಿಫಿಕ್ ಕಂ. ಹದಡಿ ರಸ್ತೆ, ದಾವಣಗೆರೆ.
ಮೊ : 9986006349

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd., www.doctorsquery.com

**ಬೇಕಾಗಿದ್ದಾರೆ**
A.N.M ಅಥವಾ G.N.M ಕೋರ್ಸ್ ಆದವರು ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಶ್ರೀ ಗುರುನಾಥ ಆಸ್ಪತ್ರೆ ಕೆ.ಆರ್ ರಸ್ತೆ ದಾವಣಗೆರೆ.
ಸಂಪರ್ಕಿಸಿ :
96633 67838

# ಹಣವಂತರಿಂದ ಮಾತ್ರ ರಾಜಕಾರಣ ಎಂಬಂತಾಗಿ ನಮ್ಮನ್ನು ನಾವೇ ರಕ್ಷಿಸಿಕೊಳ್ಳುವ ಪರಿಸ್ಥಿತಿ ಬಂದಿದೆ



> 'ಸರ್ವೇಜನ ಸುಖಿನೋಭವಂತು' ಎಂಬುದು ಹಿಂದೂ ಧರ್ಮದ ಮೂಲ ಆಶಯ. ಹಸಿದವನಿಗೆ ಅನ್ನ ಹಾಕುವುದು ಹಿಂದೂಗಳ ಕರ್ತವ್ಯ.
> - ಕಾಳಿಮಠದ ಶ್ರೀ ಋಷಿಕುಮಾರ ಸ್ವಾಮೀಜಿ

ದಾವಣಗೆರೆ, ಜು. 24- ಒಂದೇ ಸೂರು, ಒಂದೇ ಕಾನೂನು ಜಾರಿಯಾದರೆ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯ ಎಂದು ಕಾಳಿಮಠದ ಶ್ರೀ ಋಷಿಕುಮಾರ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಶಿವಯೋಗಾಶ್ರಮದ ಆವರಣದಲ್ಲಿ ವಿಶ್ವ ಹಿಂದೂ ರಕ್ಷಣಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಹಿಂದೂ ಧರ್ಮ ಜಾಗೃತಿ ಅಭಿಯಾನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಜನಸಂಖ್ಯೆ ಸ್ಫೋಟಗೊಂಡರೆ ಅನ್ನ, ವಿದ್ಯೆ ನೀಡಲು ಅಸಾಧ್ಯ. ಒಂದೇ ಸೂರು, ಒಂದೇ ಕಾನೂನು, ನಾವಿಬ್ಬರು ನಮಗಿಬ್ಬರೇ ಮಕ್ಕಳು ಸಾಕು ಎನ್ನುವಂತಾದರೆ ಮಾತ್ರ ಸರ್ಕಾರಗಳಿಂದ ಸಾಕ್ಷರತೆ, ಆಹಾರ ನೀಡಲು ಸಾಧ್ಯವಾಗುತ್ತದೆ ಎಂದರು.

ಅನೇಕ ಹಿಂದೂ ಸಂಘಟನೆಗಳನ್ನು ಕಟ್ಟಿಕೊಂಡು ನಾವು ದೇಶದಲ್ಲಿ ಹಿಂದೂ ರಕ್ಷಣೆ ಮಾಡಬೇಕಾದ ಸ್ಥಿತಿ ಬಂದೊದಗಿದೆ. ಹಣವಂತರು ಮಾತ್ರ ರಾಜಕಾರಣ ಮಾಡಬೇಕಾಗಿರುವುದರಿಂದ ನಮ್ಮನ್ನು ನಾವೇ ರಕ್ಷಿಸಿಕೊಳ್ಳುವಂತಹ ಪರಿಸ್ಥಿತಿ ಎದುರಾಗಿದೆ ಎಂದು ಹೇಳಿದರು.

ರಾಜಕಾರಣ ಗಾಂಭೀರ್ಯದ ನಿಧಿ. ಅದು ಗಜ ನಡಿಗೆ. ಇದುವರೆಗೂ ನಾವು ಯಾರಲ್ಲೂ ನೋಡದ ಗಜ ಗಾಂಭೀರ್ಯವನ್ನು ಪ್ರಧಾನಿ ಮೋದಿಯವರಲ್ಲಿ ಮಾತ್ರ ಕಾಣುತ್ತೇವೆ ಎಂದರು.

### ಶ್ರೀರಂಗಪಟ್ಟಣ : ಮದಕರಿ ನಾಯಕ ಸ್ಮಾರಕ ಖಚಿತ

ಚಿತ್ರದುರ್ಗದಲ್ಲಿ 150 ಅಡಿ ಎತ್ತರದ ಮದಕರಿ ನಾಯಕರ ಕಂಚಿನ ಪ್ರತಿಮೆ, ಶ್ರೀರಂಗಪಟ್ಟಣದಲ್ಲಿ ಮದಕರಿ ನಾಯಕರ ಸ್ಮಾರಕ ನಿರ್ಮಾಣ ಮಾಡುವುದು ಖಚಿತ. ಏನೇ ಅಡೆತಡೆಗಳು, ವಿಘ್ನಗಳು ಬಂದರೂ ಎದೆಗುಂದದೇ ಸ್ಮಾರಕ ಮತ್ತು ಕಂಚಿನ ಪ್ರತಿಮೆ ಅನಾವರಣ ಮಾಡುವುದು ಶತಸಿದ್ಧ ಎಂದು ಋಷಿಕುಮಾರ ಶ್ರೀಗಳು ಘೋಷಿಸಿದರು.

ಕೆಲವರು ನಾವು ಹಿಂದೂಗಳ ವಿರೋಧಿಯಲ್ಲ ಹಿಂದುತ್ವದ ವಿರೋಧಿ ಎಂದು ಭಾಷಣ ಬಿಗಿಯುತ್ತಾರೆ. ಅಂತವರಿಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಅಂತವರಿಗೆ ಹಿಂದೂ ಧರ್ಮವನ್ನು ಅರ್ಥ ಮಾಡಿಸಬೇಕಿದೆ ಎಂದು ತಿಳಿಸಿದರು.

ಓವೈಸಿಯಂತವರು ಹಿಂದೂಗಳ ಹತ್ಯೆ ಮಾಡುವುದಾಗಿ ಬಹಿರಂಗವಾಗಿ ಕರೆ ನೀಡುತ್ತಾರೆ. ಇಂತವರ ಹೇಳಿಕೆಗಳಿಗೆ ಕಡಿವಾಣ ಹಾಕಲು ಸರ್ಕಾರಗಳು ಪೊಲೀಸರಿಗೆ ಪೂರ್ಣ ಪ್ರಮಾಣದ ಅಧಿಕಾರ ನೀಡಿದರೆ ಓವೈಸಿ ಪರಿವಾರದವರ ಸೊಲ್ಲಡಗಿಸಲು ಸಾಧ್ಯವಿದೆ. ಭಾರತೀಯ ಪೊಲೀಸರಲ್ಲೂ ಹಿಂದೂ ಧರ್ಮದ ಕೆಚ್ಚು ಮತ್ತು ಕಿಚ್ಚು ಇದ್ದೇ ಇರುತ್ತದೆ ಎಂದರು.

ಬಹುಸಂಖ್ಯಾತ ಹಿಂದುಗಳೆಲ್ಲಾ ಒಂದಾಗಿ ಹಿಂದೂ ಸಮಾಜ ರಕ್ಷಣೆಗೆ ಮುಂದಾಗಬೇಕಿದೆ. ಸ್ವಾಮೀಜಿಗಳು ಸಹ ಇದಕ್ಕೆ ಕೈಜೋಡಿಸಬೇಕಾಗಿದೆ. ವಿಶ್ವ ಹಿಂದೂ ರಕ್ಷಣಾ ಸಮಿತಿ ಪದಾಧಿಕಾರಿಗಳು ಹಿಂದೂ ಧರ್ಮದ ರಕ್ಷಣೆಗೆ ಕಂಕಣಬದ್ಧರಾಗುವಂತೆ ಸಲಹೆ ನೀಡಿದರು.

ಸಮ್ಮುಖ ವಹಿಸಿದ್ದ ಚಿತ್ರದುರ್ಗ ಬಂಜಾರ ಗುರುಪೀಠದ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ, ದಬ್ಬಾಳಿಕೆ, ಹತ್ಯೆ ಹೆಚ್ಚಾಗುತ್ತಿರುವುದು ನೋವಿನ ಸಂಗತಿಯಾಗಿದೆ. ಕೆಲವರು ಹಿಂದೂಗಳ ದೌರ್ಬಲ್ಯ ಎಂದು ತಿಳಿದಿದ್ದರೆ ಅದು ಅವರ ತಪ್ಪು ಗ್ರಹಿಕೆ. ಧರ್ಮ ದ್ರೋಹ ಕೆಲಸ ಮಾಡುವವರಿಗೆ ಎಂದಿಗೂ ಉಳಿಗಾಲವಿಲ್ಲ ಎಂದರು.

ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್ ಮಾತನಾಡಿ, ಬಹುಸಂಖ್ಯಾತ ಹಿಂದೂ ರಾಷ್ಟ್ರದಲ್ಲಿ ಹೊಡೆದಾಡುವ ಪರಿಸ್ಥಿತಿ ಇರುವುದು ದುರ್ದೈವದ ಸಂಗತಿಯಾಗಿದೆ. ದೇಶದಲ್ಲಿ 10 ಸಾವಿರ ಜಾತಿಗಳಿವೆ ಎಂಬುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಜಗತ್ತಿನ ಏಕೈಕ ಹಿಂದೂ ರಾಷ್ಟ್ರ ಭಾರತ ಎಂದರು.

ಮೂರು ಸಾವಿರಕ್ಕೂ ಹೆಚ್ಚು ಮಠಾಧೀಶರುನಮ್ಮದೇಶದಲ್ಲಿರುವುದರಿಂದಲೇ ಇನ್ನೂ ಹಿಂದೂ ಧರ್ಮ ತಲೆ ಎತ್ತಿ ನಿಂತಿದೆ. ಬಹುತೇಕ ಮಠಗಳಲ್ಲಿ ಅನ್ನ ಮತ್ತು ಅಕ್ಷರ ದಾಸೋಹಗಳು ನಡೆಯುತ್ತಾ ಬಂದಿವೆ. ಮಠಗಳು ಅಕ್ಷರ ದಾಸೋಹ ನೀಡದಿದ್ದರೆ ಸಾಕ್ಷರತೆ ಪ್ರಮಾಣ ಹೆಚ್ಚಾಗಲು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರತಾಪ್ ಅವರು, ಹಿಂದೂ ರಾಷ್ಟ್ರದಲ್ಲಿ ಹಿಂದೂಗಳ ರಕ್ಷಣೆ ಮಾಡಬೇಕಾಗಿರುವುದು ವಿಪರ್ಯಾಸದ ಸಂಗತಿ. ಇಲ್ಲಿ ಓಲೈಕೆ ರಾಜಕಾರಣ ಇರುವುದರಿಂದ ಸಹಬಾಳ್ವೆ ಸಾಧ್ಯವಾಗುತ್ತಿಲ್ಲ. ಯಾವ ಪಕ್ಷದವರೇ ಆಗಿರಲಿ ನಾವೆಲ್ಲಾ ಭಾರತೀಯರು, ನಾವೆಲ್ಲಾ ಹಿಂದೂಗಳು ಎಂಬ ವಿಶಾಲವಾದ ಭಾವನೆ ಮೂಡಬೇಕಾಗಿದೆ ಎಂದರು.

ವೈದ್ಯಶ್ರೀ ಶ್ರೀ ಗುರುದೇವ ಸ್ವಾಮೀಜಿ, ರತ್ನಭಾರತ ರೈತ ಸಮಾಜದ ಸಂಸ್ಥಾಪಕ ಅಧ್ಯಕ್ಷ ನಾಗನಗೌಡ ದಾ. ಮರೀಗೌಡರ, ದಲಿತ ಮುಖಂಡ ಆಲೂರು ನಿಂಗರಾಜ್, ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ರೈತ ಮುಖಂಡ ಕಕ್ಕರಗೊಳ್ಳದ ಕೆ.ಪಿ. ಕಲ್ಲಿಂಗಪ್ಪ ಮಾತನಾಡಿದರು.

ವಿಶ್ವ ಹಿಂದೂ ರಕ್ಷಣಾ ಸಮಿತಿ ಅಧ್ಯಕ್ಷ ಜಿ.ಎ. ಗುರುದೇವ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಮಹಿಳಾ ಮುಖಂಡರಾದ ಸರೋಜಮ್ಮ ದೀಕ್ಷಿತ್, ಸಮಿತಿ ಪದಾಧಿಕಾರಿ ಹನುಮಂತಪ್ಪ, ಎಸ್.ಪಿ. ಶ್ರೀನಿವಾಸ್, ಪರಶುರಾಮ್ ಮತ್ತಿತರರು ಭಾಗವಹಿಸಿದ್ದರು.

ಸಹನಾ ಮಂಜುನಾಥ 'ವಂದೇ ಮಾತರಂ' ಗೀತೆಯನ್ನಾಡಿದರು. ಬಿಜೆಪಿ ಮಹಿಳಾ ಮುಖಂಡರಾದ ಚೇತನಾ ಶಿವಕುಮಾರ್ ನಿರೂಪಿಸಿದರು. ಹನುಮಂತಪ್ಪ ಸ್ವಾಗತಿಸಿದರು.

# ಸಿದ್ಧರಾಮೇಶ್ವರ ರಥ ವಜ್ರಮಹೋತ್ಸವಕ್ಕೆ ಚಾಲನೆ

ದಾವಣಗೆರೆ, ಜು.24- ದೇಶ, ನಾಡು, ನುಡಿ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಕಾಯಕ ಹಾಗೂ ಯಾವುದೇ ರಂಗದ ಧ್ವಜವು ಆ ರಂಗದ ಸ್ವಾಭಿಮಾನ, ಧ್ಯೇಯ, ಸಂಸ್ಕೃತಿಯ ಪ್ರತೀಕ ಹಾಗೂ ಚೈತನ್ಯದ ಚಿಲುಮೆಯ ಸಂಕೇತವಾಗಿದೆ ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿಯವರು ತಿಳಿಸಿದರು.

ನಗರದ ವೆಂಕಾಭೋವಿ ಕಾಲೋನಿಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ, ಶಾಖಾಮಠದಲ್ಲಿ ಇಂದಿನಿಂದ ಪ್ರಾರಂಭವಾದ ಶಿವಯೋಗಿ ಸಿದ್ಧರಾಮೇಶ್ವರ ರಥದ ವಜ್ರಮಹೋತ್ಸವ ನಿಮಿತ್ತ ಧರ್ಮ-ಧ್ವಜಾರೋಹಣ ನೆರವೇರಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಧರ್ಮವು ಸತ್ಸಂಪ್ರದಾಯ, ಸತ್ ಸತ್ಸಂಗ, ಸತ್ ಸಂಸ್ಕೃತಿ, ಸತ್ ಜೀವನದ ಗೌರವ ಹಾಗೂ ಮೌಲ್ಯಯುತ ಒಂದು ಎಲ್ಲೆಯನ್ನು ಹಾಕಿಕೊಡುತ್ತದೆ. ಶರಣರು ಕಾಯಕ ದಾಸೋಹ ಶಿವಯೋಗದ ತಳಹದಿ ಮೇಲೆ ಸುಖ-ಶಾಂತಿ, ನೆಮ್ಮದಿಯ ಮಾರ್ಗೋಪಾಯವನ್ನು ತೋರಿದ್ದಾರೆ. ಕಾಯಕ ಸಮುದಾಯದ ಅಸ್ಮಿತೆ ಸಿದ್ಧರಾಮೇಶ್ವರರು, ಕಾಯಕದಿಂದ ಜಲ-ಜನ-ಜಾತ್ಯತೀತ ನಾಡಿನ ಜಾಗೃತಿವುಂಟು ಮಾಡಿದರು. ಅನ್ನಛತ್ರ, ಅರವಟಿಕೆ, ಗುರುಕುಲ ಮೂಲಕ ಅನ್ನದಾಸೋಹ, ಜ್ಞಾನ ದಾಸೋಹದ ಜಾಗೃತಿ ಮೂಡಿಸಿದರು. ವೈಜ್ಞಾನಿಕ, ವೈಚಾರಿಕ, ಧಾರ್ಮಿಕ ಜಿಜ್ಞಾಸುಗಳಿಗೆ ಶಿವಯೋಗದ ಜಾಗೃತಿ ಮೂಡಿಸಿದರು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಇಂದಿನಿಂದ ಮೊದಲನೇ ಶ್ರಾವಣ ಸೋಮವಾರದವರೆಗೂ ಮಹಾವಚನ ಭಜನೆ ಏರ್ಪಡಿಸಿದೆ. ಆಗಸ್ಟ್ 1 ರಂದು ರಥದ ವಜ್ರಮಹೋತ್ಸವ ಜರುಗಲಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಭೋವಿ ಸಮಾಜದ ಮುಖಂಡರಾದ ಡಿ.ಬಸವರಾಜ್, ಹೆಚ್.ಆನಂದಪ್ಪ, ಜಯಣ್ಣ, ವಕೀಲ ಗೋಪಾಲ, ಆರ್. ಶ್ರೀನಿವಾಸ್, ಮೂರ್ತೆಪ್ಪ. ಕೇಶವಮೂರ್ತಿ, ಶೇಖರಪ್ಪ, ಎಇಇ. ವೆಂಕಟೇಶ್. ಎ.ಬಿ.ನಾಗರಾಜು, ಹರಿಹರ ರಾಮಣ್ಣ, ಹೊನ್ನಳ್ಳಿ ನಾಗರಾಜ್, ಜಗಳೂರು ದೇವರಾಜ್ ಚನ್ನಗಿರಿ, ಗದಗ ರಾಜಪ್ಪ ಹಾಗೂ ಇತರರು ಭಾಗವಹಿಸಿದ್ದರು.



# ಸೋನಿಯಾ ವಿಚಾರಣೆ ವಿರುದ್ಧ ಮೌನ ಸತ್ಯಾಗ್ರಹ

ಬೆಂಗಳೂರು, ಜು. 24 – ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮಂಗಳವಾರ ಇ.ಡಿ. ವಿಚಾರಣೆಗೆ ಹಾಜರಾಗುವಾಗ ಮೌನ ಸತ್ಯಾಗ್ರಹ ನಡೆಸುವುದಾಗಿ ರಾಜ್ಯ ಕಾಂಗ್ರೆಸ್ ತಿಳಿಸಿದೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣದ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಸೋನಿಯಾ ಗಾಂಧಿ ಅವರು ದೆಹಲಿಯ ಇ.ಡಿ. ಕಚೇರಿ ಪ್ರವೇಶಿಸುವುದರಿಂದ ಹಿಡಿದು ಅವರು ಹೊರ ಬರುವವರೆಗೆ ಮೌನ ಸತ್ಯಾಗ್ರಹ ನಡೆಸಲಾಗುವುದು ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

# ಅಣಜಿ: ಸಿ.ಟಿ.ಶ್ರೀನಿವಾಸ್ ಆಯ್ಕೆ



ದಾವಣಗೆರೆ, ಜು.24- ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಟಿ. ಶ್ರೀನಿವಾಸ್ ಮೆಳ್ಳೇಕಟ್ಟೆ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ ಎಂದು ಚುನಾವಣಾಧಿಕಾರಿ ಭಾಗ್ಯಶ್ರೀ ಎಸ್.ಪಾಟೀಲ್ ಮತ್ತು ಸಿಇಓ ಎಂ.ಎಸ್.ಬಸವರಾಜಯ್ಯ ಅವರುಗಳು ತಿಳಿಸಿದ್ದಾರೆ.

# ಮಾಚಿದೇವ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ - ಸಾಲಕ್ಕೆ ಅರ್ಜಿ

ದಾವಣಗೆರೆ,ಜು.24- ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ 2022-23ನೇ ಸಾಲಿನ ಸ್ವಯಂ ಉದ್ಯೋಗ ನೇರ ಸಾಲ ಹಾಗೂ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆಗಳ ಅನುಕೂಲಕ್ಕಾಗಿ ಹಿಂದುಳಿದ ವರ್ಗಗಳ ಮಡಿವಾಳ ಮತ್ತು ಅದರ ಉಪಜಾತಿಗಳಿಗೆ ಸೇರಿದ ಜನರ ಆರ್ಥಿಕ ಅಭಿವೃದ್ಧಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 3 ಕೊನೆಯ ದಿನವಾಗಿದೆ. ಮಾಹಿತಿಗೆ 08192-230934 ಸಂಪರ್ಕಿಸಬಹುದು ಎಂದು ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
15-9-2022 ರಿಂದ ಬಸ್ ಪ್ರವಾಸ :
ಶ್ರೀಶೈಲ, ಮಹಾನಂದಿ, ಮಂತ್ರಾಲಯ, ಹೈದರಾಬಾದ್
5 ದಿನ ಬಸ್ ಪ್ರವಾಸ ರೂ. 10900/-
27-9-2022 ರಿಂದ 5 ದಿನಗಳ ಪ್ರವಾಸ :
ಶಿರಡಿ, ಎಲ್ಲೋರ, ಶನಿಸಿಂಗನಾಪುರ, ಸೋಲಾಪುರ, ಪಂಡರಾಪುರ, ಕೊಲ್ಲಾಪುರ
ಬಸ್ ಪ್ರವಾಸ ರೂ. 10900/-
3-9-2022 ರಿಂದ 7 ದಿನಗಳ ಗುಜರಾತ್ ವಿಮಾನ ಪ್ರವಾಸ:
ಸೋಮನಾಥ, ನಾಗೇಶ್ವರ, ಪೋರ್ ಬಂದರ್, ಸರ್ದಾರ್ ಪಟೇಲ್ ಪ್ರತಿಮೆ, ದ್ವಾರಕ, ಬೇಟ್ ದ್ವಾರಕ, ಸಬರಮತಿ ಆಶ್ರಮ, ಅಕ್ಷರಧಾಮ
ರೂ.29500/-
11-10-22 ರಿಂದ 12 ದಿನಗಳ ರೈಲು ಪ್ರವಾಸ:
ದೆಹಲಿ, ಆಗ್ರಾ, ಮಥುರ, ಕಾಶಿ, ಅಯೋಧ್ಯೆ, ಸಾರಾನಾಥ್, ಪ್ರಯಾಗ್ ರಾಜ್, ಚಿತ್ರಕೂಟ
ರೂ.20500/-
(ಇಚ್ಚಿಸಿದವರಿಗೆ ವಿಮಾನ ವ್ಯವಸ್ಥೆ ಮಾಡಿಕೊಡಲಾಗುವುದು)
ಎಲ್ಲಾ ಪ್ರವಾಸಕ್ಕೂ ತಿಂಡಿ, ಊಟ, ಡೀಲಕ್ಸ್ ರೂಂ ಸೇರಿದೆ (ಸ್ಥಳೀಯ ವೆಚ್ಚ ಪ್ರತ್ಯೇಕ)

# ಬಾಹ್ಯಾಕಾಶ : ಹೂಡಿಕೆ, ಹೊಣೆಗಾರಿಕೆಯಲ್ಲಿ ಸ್ಪಷ್ಟತೆಯ ನಿರೀಕ್ಷೆ

(1ನೇ ಪುಟದಿಂದ) ರಾಕೆಟ್ ನಿರ್ಮಾಣ ಹಾಗೂ ಉಪಗ್ರಹಗಳ ಕಕ್ಷೆಯಲ್ಲಿ ಇಂಧನ ಮರು ಭರ್ತಿ ಮಾಡುವ ಉಪಕರಣಗಳ ನಿರ್ಮಾಣದಲ್ಲಿ ತೊಡ ಗಿವೆ. ಬಾಹ್ಯಾಕಾಶ ಚಟುವಟಿಕೆಗಳಿಗೆ ಸಂಬಂಧಿಸಿ ದಂತೆ ಹೊಸ ನೀತಿಯನ್ನು ರೂಪಿಸಲಾಗುತ್ತಿದೆ. ಆ ಮೂಲಕ ಈ ವಲಯಗಳಿಗೆ ಸಂಬಂಧಿಸಿದ ವಿಷ ಯಗಳನ್ನು ಬಗೆಹರಿಸಲಾಗುವುದು ಎಂದು ಪ್ರಧಾನ ಮಂತ್ರಿ ಕಚೇರಿಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಕಳೆದ ಬುಧವಾರ ಸಂಸತ್ತಿಗೆ ತಿಳಿಸಿದ್ದರು.

ಕಳೆದ ಜೂನ್‌ನಲ್ಲಿ ಮೊದಲ ಬೇಡಿಕೆ ಆಧರಿತ ಉಪಗ್ರಹವನ್ನು ಉಡಾವಣೆ ಮಾಡಲಾಗಿತ್ತು. ಟಾಟಾ ಪ್ಲೇಗಾಗಿ ಈ ಉಪಗ್ರಹ ಉಡಾವಣೆ ಮಾಡಲಾಗಿತ್ತು. ಬಾಹ್ಯಾಕಾಶದ ಖಾಸಗೀಕರಣದಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ಬಾಹ್ಯಾಕಾಶ ವಲಯದಲ್ಲಿ ಆರಂಭಿಕ ಹಂತದ ಹೂಡಿಕೆ ಬರುತ್ತಿದೆ. ಮುಂದಿನ ಹಂತದಲ್ಲಿ ಸರ್ಕಾರ ಇಲ್ಲವೇ ಖಾಸಗಿ ವಲಯದ ಬೃಹತ್ ಉದ್ಯಮಗಳಿಂದ ಹೂಡಿಕೆ ಬರಬೇಕಿದೆ ಎಂದು ಭಾರತೀಯ ಬಾಹ್ಯಾಕಾಶ ಒಕ್ಕೂಟದ ಪ್ರಧಾನ ನಿರ್ದೇಶಕ ನಿವೃತ್ತ ಲೆಫ್ಟಿನೆಂಟ್ ಜನರಲ್ ಎ.ಕೆ. ಭಟ್ ಅಭಿಪ್ರಾಯ ಪಟ್ಟಿದ್ದಾರೆ.

ಉದ್ಯಮಗಳ ಆರಂಭಿಕ ಹಂತದಲ್ಲಿ ಮೃದು ಸಾಲ, ತೆರಿಗೆ ವಿನಾಯಿತಿ, ಉತ್ಪಾದನಾ ಆಧರಿತ ಉತ್ತೇಜನಗಳು ಅಗತ್ಯ ಎಂದವರು ತಿಳಿಸಿದ್ದಾರೆ. ಖಾಸಗಿ ವಲಯಕ್ಕೆ ಸಂಬಂಧಿಸಿ ದಂತೆ ಸರ್ಕಾರಿ ನೀತಿಗಳು ಸಾಮಾನ್ಯವಾಗಿ ಕಠಿಣವಾಗಿರುತ್ತವೆ. ಹೀಗಾಗಿ ಬಾಹ್ಯಾಕಾಶ ವಲಯದಲ್ಲಿ ನಿಜವಾದ ಸಮಾನ ವೇದಿಕೆ ಸಿಗಬೇಕಿದೆ ಎಂದು ಸ್ಕೈರೂಟ್ ಏರೋಸ್ಪೇಸ್‌ನ ಸಿಇಒ ಪವನ್ ಕುಮಾರ್ ಹೇಳಿದ್ದಾರೆ. ಸ್ಕೈರೂಟ್ ಕಂಪನಿಯು ತನ್ನದೇ ಆದ 'ವಿಕ್ರಮ್' ಸರಣಿಯ ರಾಕೆಟ್‌ಗಳನ್ನು ರೂಪಿಸುತ್ತಿದೆ.

ಬಾಹ್ಯಾಕಾಶ ಹಾಗೂ ಅದರ ಬಳಕೆಯ ಮಾಲೀಕತ್ವದ ಕುರಿತು ಸ್ಪಷ್ಟ ನೀತಿಯ ಅಗತ್ಯವಿದೆ ಎಂದು ಉಪಗ್ರಹಗಳ ಉಪಕರಣ ಉತ್ಪಾದಿಸುವ ಮನಸ್ತು ಸ್ಪೇಸ್ ಕಂಪನಿಯ ಸಿಇಒ ತುಶಾರ್ ಜಾಧವ್ ಹೇಳಿದ್ದಾರೆ. ವಿದೇಶಿ ನೇರ ಹೂಡಿಕೆಗೆ ಸಂಬಂಧಿಸಿದಂತೆಯೂ ಸ್ಪಷ್ಟತೆಯ ಅಗತ್ಯವಿದೆ. ಟೆಲಿಕಾಂ ನಿಯಂತ್ರಕ ಟ್ರಾಯ್ ಮಾದರಿಯಲ್ಲೇ ಬಾಹ್ಯಾಕಾಶ ವಲಯಕ್ಕೂ ನಿಯಂತ್ರಕದ ಅಗತ್ಯವಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.



## ಮಹಿಳಾ ಸೇವಾ ಸಮಾಜ ಪ್ರೌಢಶಾಲೆಗೆ ಬಹುಮಾನ



ದಾವಣಗೆರೆ, ಜು. 24- ಜಿಲ್ಲಾ ಮಟ್ಟದ ಸ್ಮಾರ್ಟ್ ಸಿಟಿ ಮಿಷನ್‌ನ 7ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಈಚೆಗೆ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ನಗರದ ಮಹಿಳಾ ಸೇವಾ ಸಮಾಜ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಸಿ.ಹೆಚ್. ಭಾಗ್ಯಶ್ರೀ ದ್ವಿತೀಯ ಬಹುಮಾನ ಗಳಿಸಿರುತ್ತಾರೆ.

ಭಾಗ್ಯಶ್ರೀಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ದೆಹಲಿ ವ್ಯಕ್ತಿಯಲ್ಲಿ ಮಂಕಿಪಾಕ್ಸ್ ಸೋಂಕು

ನವದೆಹಲಿ, ಜು. 24 – ದೆಹಲಿಯ 34 ವರ್ಷದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ಸೋಂಕು ಕಾಣಿಸಿಕೊಂಡಿದೆ. ಇದರೊಂದಿಗೆ ದೇಶದಲ್ಲಿ ಪತ್ತೆಯಾದ ಸೋಂಕಿತರ ಸಂಖ್ಯೆ 4ಕ್ಕೆ ತಲುಪಿದೆ. ಹಿಮಾಚಲ ಪ್ರದೇಶದ ಮನಾಲಿಯಲ್ಲಿ ನಡೆದ ಕೂಟವೊಂದರಲ್ಲಿ ವ್ಯಕ್ತಿ ಪಾಲ್ಗೊಂಡಿದ್ದರು ಎಂದು ಅಧಿಕೃತ ಮೂಲಗಳು ತಿಳಿಸಿವೆ. ಸೋಂಕಿತ ವ್ಯಕ್ತಿಯನ್ನು ಈಗ ಲೋಕ ನಾಯಕ್ ಜಯಪ್ರಕಾಶ್ ಆಸ್ಪತ್ರೆಯಲ್ಲಿ ನಿಗಾದಲ್ಲಿ ಇರಿಸಲಾಗಿದೆ. ಮೂರು ದಿನಗಳ ಹಿಂದೆ ಅವರಲ್ಲಿ ಸೋಂಕಿನ ಲಕ್ಷಣಗಳು ಕಂಡು ಬಂದಿದ್ದವು.


## ಹೃದಯಪೂರ್ವಕ ಅಭಿನಂದನೆಗಳು



2021-22ನೇ ಸಾಲಿನ ಸಿಬಿಎಸ್‌ಇ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿಶಿಷ್ಟ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಅಮೃತ ವಿದ್ಯಾಲಯದ ವಿದ್ಯಾರ್ಥಿನಿ ಮತ್ತು ದಾವಣಗೆರೆ ಮಹಾನಗರ ಪಾಲಿಕೆ ಕಂದಾಯ ವಿಭಾಗದ ಸಹಾಯಕರಾದ ಶ್ರೀಮತಿ ಅಂಜಿನಮ್ಮ ಮತ್ತು ಶ್ರೀ ನಾಗರಾಜು ಹೆಚ್. ಹುಲ್ಲುಮನಿ ನಿಟುವಳ್ಳಿ ಇವರ ಪುತ್ರಿ

**ಕು. ಪರಮೇಶ್ವರಿ ಎನ್.ಹೆಚ್.**

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

**ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ**
ಸದಸ್ಯರು, ಮಹಾನಗರ ಪಾಲಿಕೆ, 5ನೇ ವಾರ್ಡ್
ಇಟ್ಟಿಗುಡಿ ಮಂಜುನಾಥ, ಕಾಂಗ್ರೆಸ್ ಮುಖಂಡರು
ವಾಸುದೇವ ಆರ್. ಕಾಂಗ್ರೆಸ್ ಮುಖಂಡರು
ಕೆ.ಬಿ. ರುದ್ರೇಶ್, ಪತ್ರಕರ್ತರು
ಹಾಗೂ ಜಿಲ್ಲಾಧ್ಯಕ್ಷರು, ಕ.ರ.ವೇ. ಸ್ವಾಭಿಮಾನಿ ಸೇನೆ, ದಾವಣಗೆರೆ ಜಿಲ್ಲೆ
ಕೆ.ಎಸ್. ಬಸವರಾಜ, ಕಾಂಗ್ರೆಸ್ ಮುಖಂಡರು



## ಅಶ್ರುತರ್ಪಣೆ



ದಿನಾಂಕ 23.7.2022ರಂದು ನಿಧನರಾದ ಕೊಕ್ಕನೂರು ಗ್ರಾಮದ ಹಿರಿಯರೂ, ದಾವಣಗೆರೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರೂ, ನಮ್ಮ ಶಿವ ವಿವಿಧೋದ್ದೇಶ ಸಹಕಾರ ಸಂಘದ ಹಿರಿಯ ನಿರ್ದೇಶಕರೂ ಆದ

**ಶ್ರೀ ಜಿ. ದ್ಯಾಮಪ್ಪ**

ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ...

♦ ಡಾ.ಬಿ. ಚಂದ್ರಶೇಖರ್ ಅಧ್ಯಕ್ಷರು, ಮಲೇಬೆನ್ನೂರು ♦ ಜಿ.ಆಂಜನೇಯ ಉಪಾಧ್ಯಕ್ಷರು, ಯಲವಟ್ಟಿ

ನಿರ್ದೇಶಕರುಗಳಾದ :
♦ ಬಣಕಾರ ವಿರೂಪಾಕ್ಷಪ್ಪ, ಹನಗವಾಡಿ
♦ ಹೆಚ್.ಜಿ ಚಂದ್ರಶೇಖರ್, ಮಲೇಬೆನ್ನೂರು
♦ ಕೆ.ಎಸ್. ರಂಗನಾಥ್, ಮಲೇಬೆನ್ನೂರು
♦ ಶ್ರೀಮತಿ ಸರೋಜಮ್ಮ ಭರಮಗೌಡ, ಮಲೇಬೆನ್ನೂರು
♦ ಹೆಚ್.ಬಿ ಶಿವಕುಮಾರ್, ಕುಂಬಳೂರು
♦ ಜಿ.ಎಸ್. ರವಿಶಂಕರ್, ಬೆಳ್ಳೂಡಿ
♦ ಶ್ರೀಮತಿ ನಾಗರತ್ನ, ಬಿ.ಜಿ. ಧನಂಜಯ, ನಿಟ್ಟೂರು
♦ ಹೆಚ್. ಷಣ್ಮುಖಪ್ಪ, ಕುಂಬಳೂರು ♦ ಎನ್.ಎಲ್ ಪ್ರಕಾಶ್, ಜಿಗಳಿ
♦ ಎ.ದೇವೇಂದ್ರಪ್ಪ, ಬೆಳ್ಳೂಡಿ

ವಿಶೇಷ ಆಹ್ವಾನಿತರು :
♦ ಬಿ.ಶೇಖರಪ್ಪ, ಹೊಳೆಸಿರಿಗೆರೆ ♦ ಎಸ್. ಸಿದ್ದೇಶ್, ಮಲೇಬೆನ್ನೂರು
ಮತ್ತು ಸಿಬ್ಬಂದಿ ವರ್ಗ

**ಶಿವ ವಿವಿಧೋದ್ದೇಶ ಸಹಕಾರ ಸಂಘ ನಿ., ಮಲೇಬೆನ್ನೂರು, ಶಾಖೆ : ಹೊಳೆಸಿರಿಗೆರೆ.**












JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte